# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್


ದಾವಣಗೆರೆ, ಭಾನುವಾರ, ಆಗಸ್ಟ್ 04, 2024

ಸಂಪುಟ : 51 ಸಂಚಿಕೆ : 82 ☎ 08192-254736 91642 99999 RNI No: 27369 ಪುಟ : 6 ರೂ : 5.00

www.janathavani.com janathavani@mac.com











**ದಿನಾಂಕ : 04.08.2024 ರಿಂದ 10.08.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ನೀವು ಆರಂಭಿಸಿರುವ ವೃತ್ತಿಯಲ್ಲಿ ಸಂತೋಷಕರ ವಾತಾವರಣವಿದ್ದು, ನೆಮ್ಮದಿ ಕಾಣುವಿರಿ. ಕಂಪನಿಗಳಲ್ಲಿ ಕೆಲಸ ಮಾಡುವವರಿಗೆ ಉದ್ಯೋಗದಲ್ಲಿ ಮುಂಬಡ್ತಿ ಸಿಗಲಿದೆ. ಹಿರಿಯ ಮೇಲಾಧಿಕಾರಿಗಳು ಕೊಡಮಾಡುವ ನೆರವನ್ನು ಮುಕ್ತ ಮನಸ್ಸಿನಿಂದ ತೆಗೆದುಕೊಳ್ಳಿ, ಆದಾಯ ಮಧ್ಯಮ ಸ್ಥರದಲ್ಲಿರುವುದರಿಂದ ಹೊಸ ಯೋಜನೆಗಳ ಗೊಡವೆ ಬೇಡ, ಮನೆಯಲ್ಲಿ ಹಿರಿಯರಿಗೆ ಅನಾರೋಗ್ಯ ಸಮಸ್ಯೆ ಕಾಡಲಿದೆ, ಮಹಿಳೆಯರಿಗೆ ಬೆನ್ನುನೋವು ಅಥವಾ ಮಂಡಿನೋವು ಬಾಧಿಸಲಿದೆ, ವ್ಯವಹಾರ ವೃದ್ಧಿಸಲಿದೆ. ಭಾನು-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ನಿಮ್ಮ ಆದಾಯದಲ್ಲಿ ಹೆಚ್ಚಳ ಕಂಡಷ್ಟೇ ಖರ್ಚಿನ ಬಾಬ್ತು ಇರುವುದರಿಂದ ಹೆಚ್ಚಿನ ಆರ್ಥಿಕ ತೊಂದರೆಗಳನ್ನು ತೆಗೆದುಕೊಳ್ಳಲು ಹೋಗಬೇಡಿ. ಹಲವು ಮೂಲಗಳಿಂದ ಬರಬೇಕಾಗಿರುವ ಹಣಕಾಸು ಸಮಯದಲ್ಲಿ ಬರದೇಹೋಗಬಹುದು. ಯುವಜನರು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದರಿಂದ ಹಲವು ಮಾರ್ಗೋಪಾಯಗಳು ಕಾಣಬಹುದು. ಅವಿವಾಹಿತರಿಗೆ ಉತ್ತಮ ಸಂಬಂಧದೊಂದಿಗೆ ಕಂಕಣ ಕೂಡಿಬರಲಿದೆ, ದುಶ್ಚಟಗಳಿಂದ ದೂರವಿದ್ದಷ್ಟೂ ವೈಯಕ್ತಿಕ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ಕುಲ ದೇವತಾರಾಧನೆ ಮಾಡಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಮಹಿಳೆಯರು ಹಣಕಾಸಿನ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸದೇ ಹೋದಲ್ಲಿ ಮುಂದೆ ತುಂಬಾ ತೊಂದರೆ ಅನುಭವಿಸಬೇಕಾದೀತು, ಆಡಲಿರುವ ಒರಟು ಮಾತುಗಳಿಂದ ಬಂಧುಗಳೊಂದಿಗೆ ಭಿನ್ನಾಭಿಪ್ರಾಯ ಮೂಡಲಿದೆ, ಹಿಂದುಳಿದಿದ್ದ ಕೆಲಸ ಕಾರ್ಯಗಳು ಈ ವಾರದ ಮಧ್ಯದಲ್ಲಿ ಕೈಗೂಡಲಿವೆ, ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಮೇಲಿಂದ ಮೇಲೆ ವಿಚಾರಿಸುತ್ತಿರುವುದು ಮೇಲು, ಮನೆಗೆ ಅತಿಥಿಗಳ ಆಗಮನವಾಗಲಿದೆ, ಕಳೆದು ಹೋಗಿದ್ದ ವಸ್ತು ಮರಳಿ ಕೈ ಸೇರಲಿದೆ, ಗೋ ಸೇವೆಮಾಡಿ. ಸೋಮ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಮಹಿಳೆಯರು ತಮ್ಮ ಅಲಂಕಾರಿಕ ವಸ್ತುಗಳ ಖರೀದಿಗೆಂದು ಹೆಚ್ಚಿನ ವೆಚ್ಚ ಮಾಡಲಿದ್ದಾರೆ. ಬಹಳ ಚಾಣಾಕ್ಷತನದಿಂದ ಮಾತನಾಡುವ ನೀವು ಎಂತಹ ಕೆಲಸ ಕಾರ್ಯಗಳನ್ನಾಗಲೀ ಸಾಧಿಸುವಿರಿ, ಮನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದೇವತಾ ಕಾರ್ಯಗಳು ನಡೆಯಲಿವೆ, ವಿದ್ಯಾರ್ಥಿಗಳಿಗೆ ಅನುಕೂಲಕರ ವಾತಾ ವರಣವಿದ್ದು, ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕಷ್ಟೇ. ಕೃಷಿಕರಿಗೆ ಬಿಡು ವಿಲ್ಲದ ಕೆಲಸವಾಗಲಿದ್ದು, ಕೈತುಂಬಾ ಸಂಪಾದನೆಯಾಗಲಿದೆ. ಗಣಿಗಾರಿಕೆ ನಡೆಸುತ್ತಿರುವವರಿಗೆ ತುಸು ಹಿನ್ನಡೆಯಾಗಲಿದೆ. ಭಾನು-ಸೋಮ-ಬುಧ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಅತಿಬುದ್ಧಿವಂತಿಕೆಯಿಂದ ನಡೆದುಕೊಳ್ಳುವ ನಿಮಗೆ ಬರಬಹುದಾದ ಆತಂಕಗಳು ದೂರವಾಗಲಿವೆ. ನಡಾವಳಿಯಲ್ಲಿ ವ್ಯಾವಹಾರಿಕತೆ ಕಂಡುಬರಲಿದೆ, ಹಣಕಾಸಿನ ವಿಚಾರದಲ್ಲಿ ಕಟ್ಟುನಿಟ್ಟಾಗಿರುವುದು ಮೇಲು, ತಾಂತ್ರಿಕ ಕ್ಷೇತ್ರದಲ್ಲಿರುವವರಿಗೆ ಕಾರ್ಯದೊತ್ತಡಗಳು ಹೆಚ್ಚಾಗಲಿದ್ದು, ಮಾನಸಿಕ ಖಿನ್ನತೆಗೆ ಒಳಗಾಗುವರು. ಹಣಕಾಸಿನ ನಿರ್ವಹಣೆ ಅಚ್ಚುಕಟ್ಟಾಗಿರುವುದು ಉತ್ತಮ, ವೈಯಕ್ತಿಕ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬೇಡಿ. ಭಾನು-ಬುಧ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಶ್ರೀಮಂತಿಕೆಯ ಬಡಿವಾರ ಯಾವುದೇ ಕಾರಣಕ್ಕೂ ಒಳ್ಳೆಯದಲ್ಲ, ಆದಾಯವು ಮಧ್ಯಗತಿಯಲ್ಲಿರುವುದರಿಂದ ಹಲವು ಯೋಜನೆಗಳಿಗೆ ಹಿನ್ನಡೆಯಾಗಬಹುದು. ಹಾಗೆಂದ ಮಾತ್ರಕ್ಕೆ ಚಿಂತೆ ಬೇಡ. ಮಧ್ಯವರ್ತಿ ವೃತ್ತಿಯಲ್ಲಿರುವವರಿಗೆ ಸಂಪಾದನೆ ಹೆಚ್ಚಲಿದೆ, ಆಸ್ತಿಗೆ ಸಂಬಂಧಪಟ್ಟ ವಿಚಾರದಲ್ಲಿ ಬಂಧುಗಳೊಂದಿಗೆ ಕಿರಿಕಿರಿ ಮಾಡುಕೊಳ್ಳುವುದು ಅಷ್ಟು ಹಿತಕರವಲ್ಲ, ರಾಜಾಕಾರಣಿಗಳಿಗೆ ಎದುರಾಳಿಗಳನ್ನು ಮಣಿಸುವ ಅಸ್ತ್ರವೊಂದು ಕೈ ಸಿಗಲಿದೆ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ವಾರದ ಆರಂಭದಲ್ಲಿ ಎಲ್ಲವೂ ಸುಖ ಎಂಬಂತೆ ಕಂಡುಬಂದರೂ ಮಧ್ಯದಲ್ಲಿ ತುಸು ತೊಂದರೆ ಅನುಭವಿಸಬೇಕಾದೀತು, ಅನುಭವಿಗಳಾದ ಹಿರಿಯರ ಸಲಹೆ ಸೂಚನೆಗಳನ್ನು ಪಾಲಿಸುವುದು ಉತ್ತಮ. ಯುವಕರು ತಮ್ಮ ನಡಾವಳಿಯಿಂದಾಗಿಯೇ ಶತ್ರುಗಳನ್ನು ಹುಟ್ಟು ಹಾಕಿಕೊಳ್ಳುವರು, ಅದು ಭವಿಷ್ಯದ ದೃಷ್ಟಿಯಿಂದ ಅಷ್ಟು ಹಿತಕರವಲ್ಲ, ರಾಜಕೀಯ ರಂಗ ಪ್ರವೇಶಕ್ಕೆ ಇದು ಸಕಾಲವಾದರೂ ಕೌಟುಂಬಿಕ ವಿಚಾರಗಳನ್ನು ಕಡೆಗಣಿಸಬೇಡಿ, ಗೋಗ್ರಾಸ ಕೊಡಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ನೀವು ಎಷ್ಟೇ ಶ್ರಮಪಟ್ಟು ಕೆಲಸ ಮಾಡಿದರೂ ಆದಾಯದ ಮೂಲದಲ್ಲಿ ಹೆಚ್ಚಳ ಕಾಣುವುದು ತುಸು ಕಷ್ಟವೇ ಸರಿ. ಯುವಕರಲ್ಲಿ ಧೈರ್ಯ, ಆತ್ಮಾಭಿಮಾನ ಹೆಚ್ಚಿನ ಪ್ರಮಾಣದಲ್ಲಿ ಮನೆ ಮಾಡಲಿದೆ, ಇದು ಮುಂದೆ ಅವರ ಪ್ರಯೋಜನಕ್ಕೆ ಬರಲಿದೆ. ಮಕ್ಕಳಿಗೆ ಕೃಷಿಯಲ್ಲಿ ಆಸಕ್ತಿ ಮೂಡಲಿದೆ, ರಾಜಕಾರಣವನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳುವ ಮೊದಲು ಆಲೋಚನೆ ಮಾಡುವುದು ಮೇಲು. ವಿದೇಶದಲ್ಲಿ ಬಂಡವಾಳವನ್ನು ಹೂಡುವ ಮೊದಲು ಆಲೋಚಿಸುವುದು ಮೇಲು. ಭಾನು-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಕೆಲವೊಮ್ಮೆ ಮನಸ್ಸಿಗೆ ಕಿರಿಕಿರಿಯೆನಿಸಿದರೂ ಇಷ್ಟವಿಲ್ಲದ ಕಾರ್ಯಗಳಲ್ಲಿ ಭಾಗವಹಿಸಲೇ ಬೇಕಾದೀತು, ಇದು ಅನಿವಾರ್ಯವಾಗಲಿದೆ. ಹೆಚ್ಚಿನ ಆದಾಯವನ್ನು ನಿರೀಕ್ಷಿಸಿಕೊಂಡು ವೆಚ್ಚದ ಬಾಬ್ತನ್ನು ಹೆಚ್ಚಿಸಿಕೊಳ್ಳಬೇಡಿ, ಮಡದಿ, ಮಕ್ಕಳ ಬೇಡಿಕೆಯನ್ನು ಪೂರೈಸಲು ತುಸು ಹೆಚ್ಚೇ ಎನ್ನಬಹುದಾದ ಧನವ್ಯಯ ಅನಿವಾರ್ಯವಾಗಲಿದೆ, ಆಡುವ ಮಾತಿನಿಂದಲೇ ಶತ್ರುಗಳು ಹುಟ್ಟಿಕೊಳ್ಳುವ ಪ್ರಸಂಗ ಬರದಂತೆ ಎಚ್ಚರ ವಹಿಸಿ ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಮಾಡುವ ಕೆಲಸ, ಕಾರ್ಯಗಳಲ್ಲಿ ಪ್ರಾಮಾಣಿಕತೆ ತೋರುವ ನಿಮಗೆ ಮೇಲಾಧಿಕಾರಿಗಳಿಂದ ಹೆಚ್ಚಿನ ಜವಾಬ್ದಾರಿ ಬರಲಿದೆ. ಕಡಿತಗೊಂಡ ಆದಾಯದಿಂದಾಗಿ ಕೌಟುಂಬಿಕ ನಿರ್ವಹಣೆಗೆ ತುಸು ತೊಂದರೆಯಾಗಲಿದೆ, ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಹಲವು ಬಾರಿ ಯೋಚಿಸುವುದು ಮೇಲು. ಚಿಕ್ಕ ಮಕ್ಕಳ ಆರೋಗ್ಯದಲ್ಲಿ ವ್ಯತ್ಯಾಸವಾಗುವ ಸಂಭವವಿದೆ, ವಿದೇಶದಲ್ಲಿರುವ ಸೋದರನಿಂದ ಸಾಕಷ್ಟು ನೆರವು ಸಿಗಲಿದೆ, ತೀರ್ಥಯಾತ್ರೆ ಮಾಡುವ ಯೋಗವಿದೆ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಅಂದುಕೊಂಡಿದ್ದೆಲ್ಲವೂ ನಡೆಯುತ್ತದೆಯೆಂಬ ಭ್ರಮೆಯಿಂದ ಹೊರಬರಲು ಪ್ರಯತ್ನಿಸಿ, ಇದರಿಂದ ನಿಮಗೆ ಒಳ್ಳೆಯದಾಗುತ್ತದೆ. ಕೆಲಸ ಕಾರ್ಯಗಳ ಒತ್ತಡದ ನೆಪದಲ್ಲಿ ವೈಯಕ್ತಿಕ ಬದುಕನ್ನು ಕಡೆಗಣಿಸಬೇಡಿ, ಸದ್ಯದ ಪರಿಸ್ಥಿತಿಯಲ್ಲಿ ಆಸ್ತಿಕೊಳ್ಳುವ ವಿಚಾರವನ್ನು ಮುಂದೆ ಹಾಕುವುದು ಉತ್ತಮ, ಮನೆಯಲ್ಲಿ ನಡೆಯಲಿರುವ ಶುಭ ಕಾರ್ಯಕ್ಕೆ ಪರಿವಾರದೊಂದಿಗೆ ಭಾಗವಹಿಸುವಿರಿ. ಕೆಲಕಾಲ ಸಾಧು ಸಜ್ಜನರ ಸಂಪರ್ಕದಲ್ಲಿರುವುದು ಮೇಲು. ಮಹಿಳೆ ಯರಿಗೆ ಉತ್ತಮ ದಿನಗಳು. ಸೋಮ-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಕೆಲವೊಮ್ಮೆ ಆಡುವ ಮಾತಿನಿಂದಲೇ ವೈರಿಗಳು ಹುಟ್ಟಿಕೊಳ್ಳುವರು, ಸೋದರನ ವಿವಾಹಕ್ಕೆ ನೂರೆಂಟು ವಿಘ್ನಗಳು ಎದುರಾಗಲಿವೆ, ಜಾಣ್ಮೆಯಿಂದ ಅದನ್ನು ಎದುರಿಸುವುದೊಂದೇ ಇರುವ ಉಪಾಯ. ಲೇವಾದೇವಿ ವ್ಯವಹಾರದಲ್ಲಿ ಹೆಚ್ಚಿನ ಹೂಡಿಕೆ ಬೇಡ. ಕೆಲಸ-ಕಾರ್ಯಗಳ ಒತ್ತಡದಿಂದ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರದಂತೆ ಎಚ್ಚರ ವಹಿಸಿ. ಸಾಕು ಪ್ರಾಣಿಗಳಿಂದ ಅಪಾಯವಾಗಬಹುದು. ಅತಿ ದೂರದ ಪ್ರಯಾಣವನ್ನು ಮುಂದೂಡುವುದು ಉತ್ತಮ. ಭಾನು-ಬುಧ-ಗುರು-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ: 4.8.2024ನೇ ಭಾನುವಾರ ಭೀಮನ ಅಮಾವಾಸ್ಯೆ (ದಿವಸಿ ಗೌರಿ ಪೂಜೆ). ದಿ. : 8.8.2024ನೇ ಗುರುವಾರ ನಾಗಚತುರ್ಥಿ, ದಿ.: 9.8.2024ನೇ ಶುಕ್ರವಾರ ನಾಗರಪಂಚಮೀ. ದಿನಾಂಕ: 10.8.2024ನೇ ಶನಿವಾರ ಸಿರಿಯಾಳಷಷ್ಠಿ.**

# ಇಂದು ಆಷಾಢ ಮಾಸದ ಭೀಮನಮಾವಾಸ್ಯೆ - ಒಂದು ಚಿಂತನೆ

ಆಷಾಢ ಮಾಸದ ಕಡೆಯ ದಿನವಾದ ಅಮಾವಾಸ್ಯೆಯನ್ನು ಭೀಮನ ಅಮಾವಾಸ್ಯೆ ಎಂದು ಕರೆಯುತ್ತಾರೆ. ಅಂದು ಜ್ಯೋತಿರ್ಭೀಮೇಶ್ವರ ವ್ರತ ಆಚರಿಸಲಾಗುತ್ತದೆ. ಇದು ಮಂಗಳ ಪ್ರದವಾದ ಮಾಂಗಲ್ಯ ಭಾಗ್ಯವನ್ನು ಕೊಡುವಂತಹ ಒಂದು ವ್ರತವಾಗಿದೆ. ಈ ವ್ರತವನ್ನು ಸುಮಂಗಲೆಯರು ಮತ್ತು ಮದುವೆಯಾಗದ ಕನ್ಯೆಯರು, ಭಗವಂತನಾದ ಈಶ್ವರ ಮತ್ತು ಅವನ ಸತಿಯಾದ ಪಾರ್ವತಿಯನ್ನು, ಜ್ಯೋತಿಯೊಳಗೆ ಆವಾಹನೆ ಮಾಡಿ ಆರಾಧಿಸುವಂತಹ ಒಂದು ವ್ರತ.

ಈ ವ್ರತದ ಕತೆಯಲ್ಲಿ ಬರುವ ಹಾಗೆ, ಒಬ್ಬ ಕನ್ಯೆಯನ್ನು ಅವಳ ಅಣ್ಣ ಸಂಪತ್ತಿನ ಆಸೆಗಾಗಿ ಮೃತನಾದ ರಾಜಕುಮಾರನಿಗೆ ಮದುವೆ ಮಾಡಿ ಕೊಟ್ಟು ಬಿಡುತ್ತಾನೆ. ಅವಳನ್ನು ಶವದ ಸಹಿತ ಕಾಡಿನಲ್ಲಿ ಬಿಟ್ಟುಬಿಡುತ್ತಾರೆ. ಮಾರನೇ ದಿನ ಬೆಳಗ್ಗೆ ಅಲ್ಲಿ ಹೂ ಬಿಡಿಸಲು ಬಂದ ಗೊಲ್ಲರಿಂದ ಅಂದಿನ ವಿಶೇಷ ಪೂಜೆಯ ಬಗ್ಗೆ ತಾನು ತಿಳಿದುಕೊಂಡು, ಮಣ್ಣಿನಲ್ಲಿ ದೀಪವನ್ನು ಮಾಡಿ ಅದಕ್ಕೆ ಭಕ್ತಿಯಿಂದ ಶಿವ ಪಾರ್ವತಿಯರನ್ನು ನೆನೆದು ಪೂಜೆ ಮಾಡುತ್ತಾಳೆ. ಅವಳ ಶ್ರದ್ಧೆ, ಭಕ್ತಿ, ನೇಮ, ನಿಷ್ಠೆ ಗಳಿಗೆ ಮೆಚ್ಚಿ ಈಶ್ವರ-ಪಾರ್ವತಿಯರು ಪ್ರತ್ಯಕ್ಷರಾಗಿ, ಪಾರ್ವತಿ ತಾಯಿಯಂತೆ ಅವಳಿಂದ ಪೂಜೆ ಮಾಡಿಸಿದರೆ ಈಶ್ವರನು ಅವಳ ಭಂಡಾರವನ್ನು ಒಡೆದು ಅದರಿಂದ ಅವಳಿಗೆ ಮಾಂಗಲ್ಯ ಭಾಗ್ಯ ನೀಡುತ್ತಾನೆ. ಮೃತನಾದ ಅವಳ ಪತಿಯು ನಿದ್ದೆಯಿಂದ ಏಳುವಂತೆ ಏಳುತ್ತಾನೆ. ಹೀಗೆ ಶಿವ-ಶಿವೆಯರು ಸೌಮಾಂಗಲ್ಯವನ್ನು ಕೊಟ್ಟಂತಹ ಈ ವ್ರತವನ್ನು ಆಚರಿಸಿದ ಹೆಣ್ಣು ಮಕ್ಕಳಿಗೆ ಒಳ್ಳೆಯ ದಾಂಪತ್ಯ ಜೀವನ ದೀರ್ಘ ಸೌಮಂಗಲ್ಯ ಮತ್ತು ಶಿವ-ಪಾರ್ವತಿಯರ ಆಶೀರ್ವಾದ ದೊರಕುತ್ತದೆ ಎಂಬ ನಂಬಿಕೆ ಇದೆ.

ಮದುವೆ ಎಂಬ ಬಂಧನದ ಮೌಲ್ಯ. ನಮ್ಮ ಧರ್ಮದಲ್ಲಿ ಬಹಳ ಅಚ್ಚುಕಟ್ಟಾಗಿ ಬಿಂಬಿತವಾಗಿದೆ. ಅದು ಎರಡು ಕುಟುಂಬಗಳ ಮಿಲನ ;ಹೊಸ ಸೃಷ್ಟಿಗೆ ಒಂದು ಕಾರಣ; ಕೇವಲ ದೇಹಗಳ ಮಿಲನವಾಗಿರದೆ, ಆತ್ಮಗಳ ಮಿಲನ. ಉದಾಹರಣೆಗೆ ರಾಮಕೃಷ್ಣ ಪರಮ ಹಂಸರು ಮತ್ತು ಶಾರದಾ ದೇವಿಯವರು ಯಾವ ಲೌಕಿಕ ಸಂಬಂಧವನ್ನು ತಮ್ಮಿಬ್ಬರ ಮಧ್ಯೆ ಇಟ್ಟುಕೊಳ್ಳದಿದ್ದರೂ ಅವರ ಆತ್ಮಗಳು ಒಂದಾಗಿದ್ದವು. ಅಷ್ಟೇ ಅಲ್ಲದೆ ಇದು ಕೇವಲ ಒಂದು ಜನ್ಮದ ಸಂಬಂಧವಾಗಿರದೆ ಏಳು ಜನ್ಮಗಳ ಸಂಬಂಧ ಎಂಬ ನಂಬಿಕೆಯೂ ಕೂಡ ಇದೆ.

ಈ ದಾಂಪತ್ಯ ಜೀವನವು ಇಬ್ಬರಿಗೂ ನಾಲ್ಕು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳ ಸಾಧನೆಗಾಗಿ ಇರುವಂತಹದ್ದು. ದಂಪತಿಗಳು



ತಮ್ಮ ಮನೆಗೆ ಬರುವ ಅತಿಥಿ ಅಭ್ಯಾಗತರ ಸೇವೆಗಳನ್ನು ಮಾಡಿ ಅವರಿಗೆ ಅನ್ನ ದಾನವನ್ನು ಮಾಡಿ, ಧರ್ಮ ಮಾರ್ಗಗಳಲ್ಲಿ ನಡೆದು, ಪ್ರಜೆಗಳಿಗೆ ಜನ್ಮ ನೀಡಿ, ಅವರನ್ನು ಸನ್ಮಾರ್ಗದಲ್ಲಿ ನಡೆಸುತ್ತಾ ಧರ್ಮ ಮಾರ್ಗವನ್ನು ಎತ್ತಿ ಹಿಡಿಯುವ ಕಾರ್ಯ ಮಾಡ ಬೇಕಾಗಿದೆ. ಈ ದಾನ, ಧರ್ಮ ಮಾಡಲು ಒಳ್ಳೆಯ ಮಾರ್ಗದಲ್ಲಿ ಧನ ಸಂಪಾದನೆ ಮಾಡುವ ಕೆಲಸವನ್ನು ಮಾಡಿ ಅಥವಾ ಕೃಷಿ ಮಾಡಿ ಬಂದ ಧನದಿಂದ ಬ್ರಹ್ಮಚಾರಿಗಳು ಮತ್ತು ಸನ್ಯಾಸಿಗಳನ್ನು ನೋಡಿಕೊಳ್ಳ ಬೇಕಾಗಿರುತ್ತದೆ. ತನ್ನ ಎಲ್ಲಾ ಜವಾಬ್ದಾರಿಗಳನ್ನು ಮುಗಿಸಿ ಕಡೆಗೆ ತನ್ನ ಸದ್ಗತಿ ಎಂದರೆ ಮೋಕ್ಷದ ದಾರಿಯನ್ನು ತಾನು ಕಂಡು ಕೊಳ್ಳಬೇಕಾಗುತ್ತದೆ. ಇದಕ್ಕೆ ಪತ್ನಿಯಾದವಳು ಪತಿಗೆ ಮತ್ತು ಪತಿಯಾದವನು ಪತ್ನಿಗೆ ಪೂರಕವಾಗಿ ಇರಬೇಕಾಗುತ್ತದೆ. ಧರ್ಮದಿಂದ ನಡೆಯದೇ ಇದ್ದಾಗ, ಧರ್ಮ ಪತ್ನಿಯು ಎಚ್ಚರಿಸಿ, ಧರ್ಮ ಮಾರ್ಗಕ್ಕೆ ತರುತ್ತಾಳೆ.

ಹೀಗಿರುವ ದಾಂಪತ್ಯ ಜೀವನದಲ್ಲಿ ಅನ್ಯೋನ್ಯತೆ ಕೊಡುವವರು ಶಿವ ಮತ್ತು ಪಾರ್ವತಿ. ಶಿವನು ಮನಸ್ಸಿಗೆ ಅಭಿಮಾನಿದರೆ ಪಾರ್ವತಿ ದೇವಿಯು ಮಾತಿಗೆ ಅಭಿಮಾನಿ. ಮಾತು ಮತ್ತು ಮನಸ್ಸು ಒಂದಾದಾಗ ಯಾವ ವೈಮನಸ್ಯವು ಬರುವುದಿಲ್ಲ. ಸಂಸಾರವು ಸುಮಧುರ ಸಂತಸದಿಂದ ತುಂಬಿರುತ್ತದೆ. ಕೇವಲ ಕಣ್ಣೋಟದಲ್ಲೇ ಅವರ ಮನದ ಭಾವ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಬರುತ್ತದೆ. ಎತ್ತರದ ಧ್ವನಿ, ಜಗಳ, ಕದನವಿಲ್ಲದ ಪ್ರೀತಿ ತುಂಬಿದ ಮನೆ ಅವರದಾಗುತ್ತದೆ.

ನಮ್ಮ ಸಮಾಜ ಹೆಜ್ಜೆ ಹೆಜ್ಜೆಗೂ ವಿಚ್ಛೇದನಗಳನ್ನು ಕಾಣುತ್ತಿದೆ. ಇದಕ್ಕೆ ಪಾಶ್ಚಾತ್ಯರ ಅನುಕರಣೆಯೇ ಒಂದು ಮುಖ್ಯ ಕಾರಣವಾಗಿದೆ. ಜೊತೆಗೆ ಅಹಂಕಾರ, ದರ್ಪ ಸೋಲಲು ತಯಾರಿಲ್ಲದ ಮಕ್ಕಳು, ಅವರ ಮನ ಬಂದಂತೆ ಕುಣಿಯುವ ಪೋಷಕರು ಇವೆಲ್ಲ ಕಾರಣವಾಗಿವೆ. ಇದು ಪರಮಾತ್ಮನು ಕಟ್ಟಿದಂತಹ ಬಂಧ ಎಂದು ನಂಬಿ ಸಹನೆಯಿಂದ, ತಾಳ್ಮೆಯಿಂದ, ಮನೆಯಲ್ಲಿರುವ ದೊಡ್ಡವರನ್ನು ಗೌರವದಿಂದ ನೋಡಿಕೊಳ್ಳುತ್ತಾ, ಏನೇ ಕಷ್ಟ ಬಂದರೂ ಧೃತಿಗೆಡದೆ ಎದುರಿಸುತ್ತಾ ಜೀವನ ನಡೆಸುತ್ತಿದ್ದ ನಮ್ಮ ಹಿಂದಿನ ಪೀಳಿಗೆಯವರನ್ನು ನಾವು ಮರೆತೇ ಬಿಟ್ಟಿದ್ದೇವೆ . ಎಷ್ಟು ಸಿಕ್ಕರೂ ತೃಪ್ತಿ ಇರದ ಈಗಿನ ಕಾಲಮಾನದಲ್ಲಿ, ಸಾಮರಸ್ಯವನ್ನು ಕಾಣುವುದೇ ಅಪರೂಪವಾಗಿದೆ.

ಸೋತು ಗೆಲ್ಲುವ ಮನೋಭಾವ ನಮ್ಮ ಮುಂದಿನ ಮಕ್ಕಳು ಬೆಳೆಸಿಕೊಳ್ಳಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಒಂದು ವಿಷಯಕ್ಕೆ ಸೋತರೂ, ಸಂಸಾರದಲ್ಲಿ ಅವರು ಗೆಲ್ಲುತ್ತಾರೆ, ಮಕ್ಕಳಿಗೆ ತಂದೆ-ತಾಯಿಯ ಪ್ರೀತಿ ದೊರಕುತ್ತದೆ, ಮಲ ತಂದೆ, ಮಲ ತಾಯಿಯ ದುಷ್ಕೃತ್ಯಗಳಿಂದ ಅವರು ಪಾರಾಗುತ್ತಾರೆ.

ಇಂತಹ ಒಂದು ಚಂದದ ದಾಂಪತ್ಯ ಜೀವನ, ಸರ್ವಶಕ್ತನಾದ ಆನಂದ ಪ್ರದನಾದ ಜ್ಯೋತಿಯೊಳಗೆ ಪ್ರಕಾಶಮಾನನಾದ ಜ್ಯೋತಿರ್ಭೀಮೇಶ್ವರನ ಪೂಜೆಯಿಂದ ದೊರಕುತ್ತದೆ. ದಾಂಪತ್ಯಕ್ಕೆ ದೇವತೆಗಳೇ ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ. ಶಿವನ ದೇಹದ ಅರ್ಧ ಭಾಗದಲ್ಲೇ ಪಾರ್ವತಿಯು ನೆಲೆಸಿದ್ದಾಳೆ. ನಾರಾಯಣನ ಹೃದಯದಲ್ಲಿ ಲಕ್ಷ್ಮಿ ವಾಸ ಸ್ಥಾನ.

ಒಂದು ಬಂಡಿಯನ್ನು ಎಳೆಯಲು ಎರಡೂ ಎತ್ತುಗಳು ಹೇಗೆ ಸಹಾಯ ಮಾಡುತ್ತವೋ ಹಾಗೆ ಸಂಸಾರವೆಂಬ ಬಂಡಿಯನ್ನು ಗಂಡ ಮತ್ತು ಹೆಂಡತಿಯರಿಬ್ಬರೂ ಸೇರಿ ಮುನ್ನಡೆಸಬೇಕು. ಅದರಲ್ಲಿ ಇಬ್ಬರು ಸಮಾನವಾಗಿ ಭಾರವನ್ನು ಹೊರಬೇಕಾಗುತ್ತದೆ. ಇಬ್ಬರು ಮಾಡುವ ಕೆಲಸಗಳು ಮಹತ್ವದ್ದೇ ಆಗಿರುತ್ತವೆ. ಈ ಚಿಂತನೆ ಇದ್ದಾಗ ಮೇಲು-ಕೀಳು ಎಂಬ ಭಾವನೆ ಹೋಗುತ್ತದೆ, ನಾನು ಎಂಬ ಅಹಂಕಾರ ಹೋಗಿ ನಾವು ಎಂಬ ವಿನಯ ಯಾವಾಗ ಬರುತ್ತದೋ ಆಗ ಸಂಸಾರವು ಆನಂದ ಸಾಗರವಾಗುತ್ತದೆ. ಇಂತಹ ಬುದ್ಧಿಯನ್ನು ಜ್ಯೋತಿರ್ಭೀಮೇಶ್ವರನು ಎಲ್ಲ ಮಕ್ಕಳಿಗೂ ಕರುಣಿಸಲಿ. ವಿಚ್ಛೇದನ ಎಂಬ ಪಿಡುಗು ನಮ್ಮ ದೇಶದಿಂದ ತೊಲಗಲಿ. ಮಕ್ಕಳಿಗೆ ತಂದೆ-ತಾಯಂದಿರ ಪೂರ್ಣ ಪ್ರೇಮ ಸಿಗಲಿ ಎಂದು ಹಾರೈಸುತ್ತೇನೆ

- ಶ್ರೀ ಕೃಷ್ಣಾರ್ಪಣಮಸ್ತು
**ರೂಪಶ್ರೀ ಶಶಿಕಾಂತ್**

## ಭೀಮನಮಾವಾಸ್ಯೆ ಆರತಿ



ಜ್ಯೋತಿರ್ಭೀ
ಮೇಶ್ವರಗೆ ಆರತಿ
ಮಾಡುವ
ಜ್ಯೋತಿಯೊಳಗೆ
ಇರುವಗೆ ಶರಣಾಗುವ

ಪ್ರೀತಿ ತುಂಬಿದ ಅಣ್ಣನಾಗಿ ಬಂದ ದೇವಗೆ
ಸತಿಗೆ ಸೌಭಾಗ್ಯ ಕೊಟ್ಟ ಮಹನೀಯಗೆ

ಶಿವೆಯ ಜೊತೆ ಸದಾ ಇರುವ ಶಾಂತರೂಪಗೆ
ಶಿವಗೆ ಮಂಗಳಕರಗೆ ಮಾಂಗಲ್ಯದಾತಗೆ
ಭವದ ಕಷ್ಟ ಪರಿಹರಿಸುವ ಭವನಾಶಗೆ
ಭುವಿಗೆ ಆನಂದ ಕೊಡುವ ಚಿದಾನಂದಗೆ

ಆತ್ಮಜ್ಯೋತಿಯಾಗಿ ಎಲ್ಲರೊಳಗಿರುವಗೆ
ಆತ್ಮಾನಂದ ಕೊಡುವ ಗಾನಲೋಲಗೆ
ಆತ್ಮಾವಲೋಕನ ಮಾಡಿಕೊಳ್ಳುವರ
ಆತ್ಮಕೆ ಅನುಭಾವದಲಿ ಕಾಣುವವನಿಗೆ

ಭೀಮ ಪರಾಕ್ರಮದ ಮಹಾರುದ್ರನಿಗೆ
ರಾಮನಾಮ ಜಪಿಸುವ ಸಿರಿಹರಿಪ್ರಿಯಗೆ
ಕಾಮ ಭಸ್ಮ ಮಾಡಿದ ತೇಜೋಮಯಗೆ
ಕಾಮೇಶ್ವರಿ ಪ್ರಿಯಗೆ ಉಮಾಮಹೇಶಗೆ

## ಭೀಮನ ಅಮಾವಾಸ್ಯೆ

ಜ್ಯೋತಿ ಬೆಳಗೋಣ ಬನ್ನಿರೇ ಭೀಮೇಶ್ವರಗೆ
ಕ್ಷಿತಿಜದಿ ಪರಮ ಮಂಗಳ ವ್ರತ ತಿಳಿಯಿರೆ
ಜ್ಯೋತಿರ್ಭೀಮೇಶ್ವರಗೆ ಆರತಿ ಮಾಡೋಣ
ಪ್ರೀತಿಯಲಿ ಸಲಹುವಾ ಕಾಣಿರೆ

ಉದಯ ಕಾಲದಲ್ಲಿ ಮಡಿಯನುಟ್ಟು
ಜಗದ ಹೆಂಗಳೆಯರು ಭಕ್ತಿಯಲಿ ಕುಳಿತು
ಒಂಭತ್ತು ಎಳೆ ದಾರ ಕಟ್ಟುತ
ಜ್ಯೋತಿರ್ಸ್ಥಾಭಕೆ ಏಕ ಚಿತ್ತದಿ ಪೂಜಿಸುತ

ಮಂಗಳ ಗೌರಿಯ ಚರಣಕೆ ಬಾಗುತ
ಮಂಗಳಾಗಿಯ ಚಂದದಿ ಅಲಂಕಾರಿಸುತ್ತಾ
ಅಂಗನೆಯರು ಭಕ್ತಿಲಿ ಪಾಡುತ
ಮಂಗಳ ದ್ರವ್ಯವ ಪಾದಕೆ ಅರ್ಪಿಸುತ

ಮುತ್ತೈದೆತನ ನೀಡೆಂದು ಬೇಡುತ
ಧೂಪ ದೀಪಗಳ ಬೆಳಗುತ
ಸಂಪಿಗೆ ಮಲ್ಲಿಕಾದಿ ಪುಷ್ಪ ಪತ್ರೆ ಅರ್ಚಿಸುತ
ಮುದ್ದು ಬಾಲಕೃಷ್ಣ ಸೋದರಿಗೆ ನಮಿಸುತ

**- ಕೋಮಲ ವಿ. ಕುಮಾರ್**, ದಾವಣಗೆರೆ.

# ಸಿದ್ಧರಾಮಯ್ಯ ಸರ್ಕಾರ ಅಸ್ಥಿರ ಯತ್ನ ವಿರೋಧಿಸಿ ನಾಳೆ ಪ್ರತಿಭಟನೆ

**ಜಿಲ್ಲಾ ಶೋಷಿತ ಸಮುದಾಯಗಳ ಒಕ್ಕೂಟದಿಂದ ಬೃಹತ್ ರ‍್ಯಾಲಿ**

ದಾವಣಗೆರೆ, ಆ. 3- ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ತೇಜೋವಧೆ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಲು ಹೊರಟಿರುವ ರಾಜ್ಯಪಾಲರ ನಡೆಯನ್ನು ವಿರೋಧಿಸಿ, ನಾಡಿದ್ದು ದಿನಾಂಕ 5 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಪ್ರತಿಭಟನೆ ನಂತರ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಶೋಷಿತ ಸಮುದಾಯಗಳ ಒಕ್ಕೂಟದ ಮುಖಂಡರು ತಿಳಿಸಿದ್ದಾರೆ.

ನಗರದ ಕುರುಬರ ವಿದ್ಯಾರ್ಥಿ ನಿಲಯದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಒಕ್ಕೂಟದ ಮುಖಂಡರು, ರಾಜ್ಯದಲ್ಲಿ ಇತ್ತೀಚಿಗೆ ಕೋಮುವಾದಿಗಳು, ಮತೀಯವಾದಿಗಳು, ಪಟ್ಟಭದ್ರ ಹಿತಾಸಕ್ತಿಗಳು ಅಧಿಕಾರದ ದಾಹ ಮತ್ತು ಕುರ್ಚಿಯ ಆಸೆಗಾಗಿ ಜನಪರವಾಗಿ ಇರುವ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿದ್ದು, ಮುಖ್ಯಮಂತ್ರಿ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ನಾಯಕರು ದೊಡ್ಡಮಟ್ಟದ ಷಡ್ಯಂತ್ರ ರೂಪಿಸುತ್ತಿದ್ದಾರೆ ಎಂದು ದೂರಿದರು.

ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ, 15 ಬಾರಿ ಬಜೆಟ್ ಮಂಡಿಸಿದ ಹಣಕಾಸು ಸಚಿವ ಸೇರಿದಂತೆ 40 ವರ್ಷಗಳ ಸುದೀರ್ಘ ರಾಜಕೀಯದಲ್ಲಿ ಹಲವು ಮಹತ್ವದ ಅಧಿಕಾರದ ಹುದ್ದೆಗಳಲ್ಲಿದ್ದರೂ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದ ನಾಯಕ ಸಿದ್ಧರಾಮಯ್ಯ ಅವರ ವರ್ಚಸ್ಸಿಗೆ ಮಸಿ ಬಳಿದು, ಅವರನ್ನು ರಾಜಕೀಯವಾಗಿ ಮುಗಿಸುವ ಹುನ್ನಾರ ನಡೆಯುತ್ತಿದೆ ಎಂದು ಕಿಡಿಕಾರಿದರು.

ಬಿಜೆಪಿ, ಜೆಡಿಎಸ್ ರಾಜ್ಯ ನಾಯಕರ ಕುತಂತ್ರಕ್ಕೆ ಬಿಜೆಪಿಯ ರಾಷ್ಟ್ರೀಯ ನಾಯಕರು ಕುಮ್ಮಕ್ಕು ನೀಡುತ್ತಿದ್ದಾರೆ. ರಾಜ್ಯಪಾಲರ ಮೂಲಕ ಸರ್ಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ಸರ್ಕಾರ ಪಿತೂರಿ ನಡೆಸುತ್ತಿದೆ ಎಂದು ಆರೋಪಿಸಿದರು. ಸಿದ್ಧರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಿ ಹಿಂದುಳಿದ ವರ್ಗಗಳ ನಾಯಕತ್ವವನ್ನು ಕೊನೆಗಾಣಿಸಬೇಕು ಎಂಬ ಸಂಚು ರೂಪಿಸಿದ್ದಾರೆಂದು ಕಿಡಿಕಾರಿದರು. ಮಾಜಿ ಶಾಸಕ ಎಸ್. ರಾಮಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪ, ಬಿ. ವೀರಣ್ಣ, ಹೊದಿಗೆರೆ ರಮೇಶ್, ಕೆ. ಚಮನ್ ಸಾಬ್, ಲಿಂಗರಾಜ್, ಫುಟ್‌ಬಾಲ್ ಗಿರೀಶ್, ಹದಡಿ ನಿಂಗಪ್ಪ, ಲೋಕಿಕೆರೆ ಸಿದ್ದಪ್ಪ ಸೇರಿದಂತೆ ಅನೇಕರಿದ್ದರು.

# ನಾಳೆಯಿಂದ ಶ್ರೀ ಜ್ಞಾನೇಶ್ವರಿ (ಭಗವದ್ಗೀತೆ) ಪಾರಾಯಣ



ದಾವಣಗೆರೆ, ಆ. 3- ನಗರದ ಮಹಾರಾಜಪೇಟೆಯಲ್ಲಿರುವ ಶ್ರೀ ಭಾವಸಾರ ಕ್ಷತ್ರಿಯ ಸಮಾಜ ವಿಠ್ಠಲ ಮಂದಿರದಲ್ಲಿ ಶ್ರಾವಣ ಮಾಸದ ಪ್ರಯುಕ್ತ ನಾಡಿದ್ದು ದಿನಾಂಕ 5 ರಿಂದ ಸೆಪ್ಟೆಂಬರ್ 2ರವರೆಗೆ ಶ್ರೀ ಜ್ಞಾನೇಶ್ವರಿ (ಭಗವದ್ಗೀತೆ) ಪಾರಾಯಣ ನಡೆಯಲಿದೆ.


ಪ್ರತಿದಿನ ಬೆಳಿಗ್ಗೆ 5.30ಕ್ಕೆ ಕಾಕಡಾರತಿ, ಭಜನೆ, ಬೆಳಿಗ್ಗೆ 7 ರಿಂದ ಶ್ರೀ ಸಂತ ಜ್ಞಾನೇಶ್ವರಿ (ಭಗವದ್ಗೀತೆ) ಪಾರಾಯಣ, 8.15ಕ್ಕೆ ನಾಮಜಪ, 8.30ಕ್ಕೆ ಮಹಾ ಮಂಗಳಾರತಿ ದೈವ ಮಂಡಳಿ ಇವರಿಂದ ಉದ್ಘಾಟನೆ. ಈ ಎಲ್ಲಾ ಕಾರ್ಯಕ್ರಮ ಭಜನಾ ಮಂಡಳಿ ನೇತೃತ್ವದಲ್ಲಿ ನಡೆಯಲಿವೆ.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸದ್ಭಕ್ತರು ಭಾಗವಹಿಸುವಂತೆ ದೈವ ಮಂಡಳಿ ಅಧ್ಯಕ್ಷ ರಘು ಮುಸಳೆ, ಕಾರ್ಯದರ್ಶಿ ಈಶ್ವರ್ ರಾವ್ ಗುಜ್ಜರ್, ಭಜನಾ ಮಂಡಳಿ ಅಧ್ಯಕ್ಷ ನಿಂಗಸ್ವಾಮಿ ರಾವ್ ಖಮಿತ್ಕರ್, ಚಂದ್ರಕಾಂತ ವಾದೋನಿ, ಮಾರುತಿ ವಂಟಕರ್, ಮಂಜುನಾಥ ಮಾಂಡ್ರೆ, ರಾಘವೇಂದ್ರ ನವಲೆ ಕೋರಿದ್ದಾರೆ.

# ವರ್ಗಾವಣೆ ದಂಧೆ ಅವ್ಯಾಹತ : ಶಾಸಕ ರಾಯರೆಡ್ಡಿ


ಬೆಂಗಳೂರು, ಆ. 3 – 1985ರಿಂದಲೂ ರಾಜ್ಯದಲ್ಲಿ ವರ್ಗಾವಣೆ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ಇದೊಂದು ದೊಡ್ಡ ಉದ್ಯಮವಾಗಿದ್ದು, ನಿಯಂತ್ರಿಸಬೇಕಿದೆ ಎಂದು ಶಾಸಕ ಬಸವರಾಜ ರಾಯರೆಡ್ಡಿ ಹೇಳಿದ್ದಾರೆ. ಕೊಪ್ಪಳದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವರ್ಗಾವಣೆ ಜಾಲ ಅವ್ಯಾಹತವಾಗಿ ಬೆಳೆದಿರುವ ಕಾರಣದಿಂದ ಯಾದಗಿರಿ ಪಿ.ಎಸ್.ಐ. ಪರಶುರಾಮ ರೀತಿಯ ಪ್ರಕರಣಗಳು ಆಗುತ್ತಿವೆ ಎಂದರು. ವರ್ಗಾವಣೆ ದಂಧೆ ತಡೆಯಲು ಸಿದ್ದರಾಮಯ್ಯ ಕಾನೂನುಗಳನ್ನು ರಚಿಸುತ್ತಿದ್ದಾರೆ. ಕೌನ್ಸೆಲಿಂಗ್ ಮೂಲಕ ವರ್ಗಾವಣೆಗೆ ಸರ್ಕಾರ ಮುಂದಾಗುತ್ತಿದೆ ಎಂದೂ ಅವರು ಹೇಳಿದರು.

## ಅಕ್ಕಿ ವರ್ತಕರಾದ ಬಿಜಾಪುರ್ ಬಸಣ್ಣ ನಿಧನ




ದಾವಣಗೆರೆ, ಎಸ್.ಎಸ್ ಬಡಾವಣೆ, 'ಬಿ' ಬ್ಲಾಕ್, 2ನೇ ಮೇನ್, 2ನೇ ಕ್ರಾಸ್ ವಾಸಿ ಅಕ್ಕಿ ವರ್ತಕರಾದ ಬಿಜಾಪುರ್ ಬಸಣ್ಣನವರು (82) ದಿನಾಂಕ 3.8.2024 ಶನಿವಾರ ಬೆಳಗ್ಗೆ 7.30 ಗಂಟೆಗೆ ನಿಧಾನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯಯು ಅಂದೇ ದಿನಾಂಕ 3.8.2024ರ ಶನಿವಾರ ಸಂಜೆ 6 ಕ್ಕೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

## ಮಹಮ್ಮದ್ ಹಬೀಬುಲ್ಲ ನಿಧನ



ದಾವಣಗೆರೆ ವಿನೋಬನಗರ, 3ನೇ ಮೇನ್, 14ನೇ ಕ್ರಾಸ್ ವಾಸಿ ಮಹಮ್ಮದ್ ಹಬೀಬುಲ್ಲಾ (72) ಇವರು ದಿನಾಂಕ 3.8.2024ರ ಶನಿವಾರ ರಾತ್ರಿ 8.30ಕ್ಕೆ ಮಸೀದಿಯಲ್ಲಿ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಶಿಕ್ಷಕ ವೃಂದದವರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.8.2024ರ ಭಾನುವಾರ ಪ್ರಾರ್ಥನೆಯ ನಂತರ ಮಧ್ಯಾಹ್ನ 2.30ಕ್ಕೆ ಪಿ.ಬಿ.ರಸ್ತೆಯ ಖಬರ್‌ಸ್ತಾನದಲ್ಲಿ ನೆರವೇರಲಿದೆ.

## ಮೂಡೇನಹಳ್ಳಿ ಶ್ರೀಮತಿ ರತ್ನಮ್ಮ ನಿಧನ



ದಾವಣಗೆರೆ ತಾ. ವಾಸಿ ದಿ. ಮೂಡೇನಹಳ್ಳಿ ಶಿವ ಮೂರ್ತೆಪ್ಪನವರ ಧರ್ಮಪತ್ನಿ ಶ್ರೀಮತಿ ರತ್ನಮ್ಮ (80) ಇವರು ದಿನಾಂಕ 3.8.2024ರ ಶನಿವಾರ ಮಧ್ಯಾಹ್ನ 12.30ಕ್ಕೆ ನಿಧನರಾಗಿದ್ದು. ಮೃತರಿಗೆ ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ದಿನಾಂಕ 4.8.2024ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಮೂಡೇನ ಹಳ್ಳಿಯ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

# ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಇಂದು ನಾಗರ ಅಮಾವಾಸ್ಯೆ



ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ, ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ನಾಗರ ಅಮಾವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ 6.30ಕ್ಕೆ ಅಭಿಷೇಕ, ವಿಶೇಷ ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ. ಶಿಕ್ಷಕರಾದ ಶ್ರೀಮತಿ ಡಿ. ನಾಗಮ್ಮ ಶ್ರೀ ಎಂ. ದೇವೇಂದ್ರಪ್ಪ ದಂಪತಿ (ಬೆನಕನಹಳ್ಳಿ, ಕೊಂಡಜ್ಜಿ ರಸ್ತೆ) ಪ್ರಸಾದದ ಸೇವಾಕರ್ತರಾಗಿದ್ದಾರೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898) ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

# ನಗರದಲ್ಲಿ ಇಂದು ಜಿಲ್ಲಾ ಮಟ್ಟದ ಬ್ಯಾಂಕಿಂಗ್ ಪರೀಕ್ಷೆ ಮಾಹಿತಿ

ಬ್ಯಾಂಕಿಂಗ್ ಉದ್ಯೋಗಿಗಳ ಕನ್ನಡ ಕೂಟ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾ ಮಟ್ಟದ ಬ್ಯಾಂಕಿಂಗ್ ಪರೀಕ್ಷೆ ಮಾಹಿತಿ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 9.30ರಿಂದ 6 ರವರೆಗೆ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿದೆ. ಬ್ಯಾಂಕಿಂಗ್ ಪರೀಕ್ಷೆ ಮಾರ್ಗದರ್ಶಕರು ಹಾಗೂ ಬ್ಯಾಂಕ್ ಉದ್ಯೋಗಿಗಳಾದ ಸತೀಶ್ ಬಿ. ಹಾಗೂ ಶರಣಕುಮಾರ್ ಕೆ.ಎ. ಅವರು ಮಾರ್ಗದರ್ಶನ ನೀಡುವರು. ವಿವರಕ್ಕೆ ಪ್ರದೀಪ್ ಪಾಟೀಲ್ (89711 44975) ಅಥವಾ ಅನಿಲ್ ನಾಯಕ್ (99863 67285) ಅವರನ್ನು ಸಂಪರ್ಕಿಸಲು ಬ್ಯಾಂಕಿಂಗ್ ಉದ್ಯೋಗಿಗಳ ಕನ್ನಡ ಕೂಟ ತಿಳಿಸಿದೆ.

# ನಗರಕ್ಕೆ ಇಂದು ಮೂಳೆ ವೈದ್ಯರು

ರಾಮನಗರ ಜಿಲ್ಲೆಯ ಕುದೂರಿನ ಪಾರಂಪರಿಕ ಮೂಳೆ ವೈದ್ಯ ಮಹದೇವಯ್ಯ ಇಂದು ನಗರಕ್ಕೆ ಆಗಮಿಸಲಿದ್ದು, ನಿಟುವಳ್ಳಿಯ ಪತಂಜಲಿ ವೆಲ್‌ನೆಸ್ ಸೆಂಟರ್‌ನಲ್ಲಿ ಮಧ್ಯಾಹ್ನ 3 ಗಂಟೆಗೆ ಚಿಕಿತ್ಸೆ ನೀಡಲಿದ್ದಾರೆ ಎಂದು ಕೆ.ಎಂ. ಪುಷ್ಪಲತಾ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9743895325, 83107 48946, 9880107918.

# ನಗರದಲ್ಲಿ ಇಂದು ನಿವೃತ್ತ ಸರ್ಕಾರಿ ನೌಕರರ ಸಭೆ

ಜಿಲ್ಲಾ ನಿವೃತ್ತ ಸರ್ಕಾರಿ ನೌಕರರ ಸಂಘದ 55ನೇ ವಾರ್ಷಿಕ ಮಹಾಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಸಂಘದ ಜಿಲ್ಲಾಧ್ಯಕ್ಷ ಕೆ.ಜಿ. ಭರತ್ ರಾಜ್ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

# ಕ್ರೀಡಾ ಪಟುಗಳ ಹಾಸ್ಟೆಲಿಗೆ ದಿನೇಶ್ ಕೆ. ಶೆಟ್ಟಿ ಭೇಟಿ



ದಾವಣಗೆರೆ, ಆ. 3 - ನಗರದ ಖೋಖೋ, ಕಬಡ್ಡಿ, ಕುಸ್ತಿ ಹಾಸ್ಟೆಲ್‌ನಲ್ಲಿ ನಿನ್ನೆ ಕ್ರೀಡಾಪಟುಗಳು ಊಟದ ವಿಷಯವಾಗಿ ಧರಣಿ ನಡೆಸಿದ ವಿಷಯವನ್ನು ತಿಳಿದುಕೊಂಡ ಜಿಲ್ಲಾ ಕ್ರೀಡಾ ಪಟುಗಳ ಸಂಘದ ಅಧ್ಯಕ್ಷರೂ ಆಗಿರುವ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಇಂದು ಹಾಸ್ಟೆಲ್‌ಗೆ ಭೇಟಿ ನೀಡಿ ಕ್ರೀಡಾಪಟುಗಳ ಊಟದ ವ್ಯವಸ್ಥೆ ಹೇಗಿದೆ ಎಂದು ಪರಿಶೀಲಿಸಿ, ಮಕ್ಕಳ ಜೊತೆ ಸಮಾಲೋಚನೆ ನಡೆಸಿದರು.

ಈ ಸಂದರ್ಭದಲ್ಲಿ ಕಬಡ್ಡಿ, ಖೋಖೋ, ಕುಸ್ತಿಯ 160ಕ್ಕೂ ಹೆಚ್ಚು ಕ್ರೀಡಾ ಪಟುಗಳು ಹಾಸ್ಟೆಲ್‌ನಲ್ಲಿ ಇದ್ದು, ತಮಗೆ ಮಾಂಸಾಹಾರ ಊಟ, ಹಣ್ಣು, ಡ್ರೈ ಫ್ರೂಟ್ಸ್ ವ್ಯವಸ್ಥೆ ಸರಿಯಾಗಿಲ್ಲ ಎಂದು ಸಮಸ್ಯೆಗಳನ್ನು ಹೇಳಿ ಕೊಂಡರು. ಕ್ರೀಡಾಪಟುಗಳಿಗೆ ಸಾಂತ್ವನ ಹೇಳಿದ ದಿನೇಶ್ ಶೆಟ್ಟಿ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಮನೂರು ಶಿವಶಂಕರಪ್ಪ ಅವರ ಗಮನಕ್ಕೆ ತಂದು ಶೀಘ್ರದಲ್ಲಿ ಎಲ್ಲಾ ಸಮಸ್ಯೆಗಳನ್ನು ಸರಿಪಡಿಸಲಾ ಗುವುದು ಎಂದು ವಿದ್ಯಾರ್ಥಿಗಳಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕೆಟಿಜೆ ನಗರದ ಸರ್ಕಲ್ ಇನ್ಸ್‌ಪೆಕ್ಟರ್ ಸುನಿಲ್ ಕುಮಾರ್, ಯುವರಾಜ್ ಇನ್ನು ಮುಂತಾದವರು ಇದ್ದರು.

# ವಚನಗಳ ನಿಜ ವೈಚಾರಿಕತೆ ಸಂವಾದ ಏರ್ಪಡಿಸಿ

**ವಚನಾನಂದ ಶ್ರೀಗಳಿಗೆ ಜಾಗತಿಕ ಲಿಂಗಾಯತ ಮಹಾಸಭಾ, ಶರಣ ಸಾಹಿತ್ಯ ಪರಿಷತ್ ಮನವಿ**

ದಾವಣಗೆರೆ, ಆ.3- ಲಿಂಗಾಯತರು ಹಿಂದೂಗಳಲ್ಲ ಎಂದು ಹೇಳಿರುವ ವಚನಾನಂದ ಶ್ರೀಗಳ ಹೇಳಿಕೆಗೆ ತಮ್ಮ ವಿರೋಧವಿದ್ದು, ಶ್ರೀಗಳು ವಚನಗಳ ನಿಜ ವೈಚಾರಿಕತೆ ಸಂವಾದ ಏರ್ಪಡಿಸುವಂತೆ ಜಾಗತಿಕ ಲಿಂಗಾಯತ ಮಹಾಸಭಾ, ಶರಣ ಸಾಹಿತ್ಯ ಪರಿಷತ್ ಮನವಿ ವಚನಾನಂದ ಶ್ರೀಗಳಿಗೆ ಮನವಿ ಮಾಡಿದೆ.

ಶನಿವಾರ ನಗರದ ಕುವೆಂಪು ಕನ್ನಡ ಭವನದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶ್ರೀಗಳಿಗೆ ಈ ಕುರಿತು ಮನವಿ ಪತ್ರ ಸಲ್ಲಿಸಲಾಯಿತು.

ಹಿಂದೂ ಒಂದು ಧರ್ಮವೇ ಅಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಹಾಗಿದ್ದ ಮೇಲೆ ನಮ್ಮ ಧರ್ಮ ಹಿಂದೂ ಧರ್ಮವಾಗಲು ಹೇಗೆ ಸಾಧ್ಯ?

ವಚನಗಳು ವೈದಿಕ ಮೌಢ್ಯದ ಶ್ರೇಷ್ಠ ಕನಿಷ್ಠ ಎನ್ನುವ ವೈಜ್ಞಾನಿಕ ವೈಚಾರಿಕತೆ ಇಲ್ಲದ ಆಚರಣೆಗಳನ್ನು ವಿರೋಧಿಸಿಯೇ ಹುಟ್ಟಿವೆ. ಹೀಗಾಗಿ ವಚನಗಳ ನಿಜ ವೈಚಾರಿಕತೆ ಬಗ್ಗೆ ಸಂಪವಾದ ಏರ್ಪಡಿಸಿ ನಮ್ಮೆಲ್ಲಾ ಗೊಂದಲಗಳಿಗೆ ತೆರೆ ಎಳೆಯುವಂತೆ ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಆಗಸ್ಟ್ 04, 2024




## ಹಿಂದೂ ಎನ್ನುವುದು ಶುದ್ಧ ಜೀವನ ಪದ್ಧತಿ: ವಚನಾನಂದ ಶ್ರೀ



ದಾವಣಗೆರೆ, ಆ.3- ಹಿಂದೂ ಎನ್ನುವುದು ಅತ್ಯಂತ ಶ್ರೇಷ್ಠವಾದದ್ದು, ಸತ್ಯ ಸನಾತನವಾದದ್ದು. ಅದೊಂದು ಶುದ್ಧ ಜೀವನ ಪದ್ಧತಿ ಎಂದು ಶ್ರೀ ವಚನಾನಂದ ಮಹಾಸ್ವಾಮೀಜಿ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹಿಂದುತ್ವ ಎಂಬುದು ವಟಾವೃಕ್ಷವಿದ್ದಂತೆ ಅದರಲ್ಲಿ ಸಾಕಷ್ಟು ರಂಬೆ-ಕೊಂಬೆಗಳಿರುತ್ತವೆ. ಬಸವಾದಿ ಶರಣರು, ಗೌತಮ ಬುದ್ಧ, ಮಹವೀರ, ಅಲ್ಲಮ ಪ್ರಭು, ಅಕ್ಕಮಹಾದೇವಿ ಮೂಲ ಸ್ತೋತ್ರದಿಂದ ಬಂದವರು. ಅನೇಕ ಹಿರಿಯ ಸ್ವಾಮೀಜಿಗಳೂ ಸೇರಿದಂತೆ ರಾಜ್ಯದಲ್ಲಿನ ಪೂರ್ವಿಕರು ಹಿಂದೂ ವೀರಶೈವ ಅಥವಾ ಹಿಂದೂ ಲಿಂಗಾಯತ ಎಂದೇ ಬರೆಸಿದ್ದಾರೆ ಎಂದರು.

ಸಾಮಾಜಿಕವಾಗಿ ನಾವೆಲ್ಲಾ ಒಂದು ಎಂದು ಎಂದು ಹೋಗಬೇಕು. ತಾತ್ವಿಕವಾಗಿ ತುಸು ವ್ಯತ್ಯಾಸವಿರುತ್ತದೆ. ಭೌತಿಕ ಹಾಗೂ ರಾಜಕೀಯವಾಗಿ ಅಖಂಡ ವೀರಶೈವ ಲಿಂಗಾಯತರು ಒಲ್ಲರೂ ಒಂದೇ ಎಂಬುದು ನಮ್ಮ ಭಾವನೆ.ಅದುಹಿಂದೂವಿಚಾರಧಾರೆಗೆಪೂರಕವಾಗಿರುವಂತಹದ್ದಾಗಬೇಕು.

ಪೂರ್ವಾಗ್ರಹ ಪೀಡಿತರಾಗಿ ಹೇಳಿದರೆ ಅದು ಅವರ ಸಮಸ್ಯೆಯೇ ಹೊರತು ನಮ್ಮ ಸಮಸ್ಯೆಯಲ್ಲ. ನಾವು ನಮ್ಮ ವಿಚಾರಗಳಿಗೆ ಎಂದಿಗೂ ಬದ್ಧರಾಗಿರುತ್ತೇವೆ ಎಂದು ಸ್ಪಷ್ಟಪಡಿಸಿದರು. ಹಿಂದೂ ಎಂಬುದು ಮಹಾಸಾಗರ. ಅದರ ನದಿಗಳು ನಾವೆಲ್ಲಾ. ಅದು ಬಸವ ಪಥ, ಜೈನ ಪಥ, ಬೌದ್ಧ ಪಥ ಇರಬಹುದು. ಎಲ್ಲವೂ ಪಥಗಳೇ ಮೂಲ ಬಂದಾಗ ನಾವೆಲ್ಲಾ ಹಿಂದೂಗಳು ಎಂಬ ಭಾವನೆ ನಮ್ಮದು ಎಂದರು.

ಮುಂದೆ ಜನಗಣತಿ ಬರುತ್ತದೆ. ಸಮಾಜದಲ್ಲಿ (4ನೇ ಪುಟಕ್ಕೆ)

## ಮಕ್ಕಳ ಬೆರಳ ಗುರುತು ಪಡೆದು ನಕಲಿ ಆಧಾರ್ : ಸಿಬಿಐನಿಂದ ಎಫ್.ಐ.ಆರ್

ನವದೆಹಲಿ, ಆ. 3 - ಫೋರ್ಜರಿ ದಾಖಲೆ ಆದರಿಸಿ ಆಧಾರ್ ಕಾರ್ಡ್ ಮಾಡುತ್ತಿದ್ದ ದೊಡ್ಡ ಜಾಲದ ವಿರುದ್ಧ ಸಿಬಿಐ ಎಫ್ಐಆರ್ ದಾಖಲಿಸಿದೆ.

ಈ ವಂಚಕರು 25 ಸಾವಿರ ರೂ.ಗಳಿಗೆ ನಕಲಿ ಆಧಾರ್ ಕಾರ್ಡ್ ಮಾಡಿಕೊಡುತ್ತಿದ್ದರು ಎಂದು ತಿಳಿಸಲಾಗಿದೆ. ಇವರು ಶಾಲಾ ಮಕ್ಕಳ ಕೈ ಬೆರಳು ಹಾಗೂ ಕಣ್ಣಿನ ಸ್ಕ್ಯಾನ್ ಪಡೆಯುತ್ತಿದ್ದರು. ಇನ್ನೂ ಕೆಲ ಪ್ರಕರಣಗಳಲ್ಲಿ ಕಾಲುಗಳ ಬೆರಳಿನ ಗುರುತು ಪಡೆದ ಉದಾಹರಣೆಗಳು ಇವೆ ಎಂದು ತಿಳಿಸಲಾಗಿದೆ.

ರಾಜಸ್ಥಾನದ ಹಲವು ಕಡೆ ನಕಲಿ ಆಧಾರ್ ಕಾರ್ಡ್ ಪ್ರಕರಣಗಳು ಬೆಳಕಿಗೆ ಬಂದಿದ್ದವು. ನಂತರ ರಾಜ್ಯ ಸರ್ಕಾರ ಈ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಿತ್ತು. ತನಿಖೆ ನಡೆಸಿದ ಸಿಬಿಐ, ಗಣಪತ್ ಸಿಂಗ್, ತೊಗರಾಮ್ ಹಾಗೂ ಕನ್ಹಯ್ಯ ಲಾಲ್ ಎಂಬುವರ ವಿರುದ್ಧ ಎಫ್ಐಆರ್ ದಾಖಲಿಸಿದೆ.

## ಕಾಣೆಯಾಗಿದ್ದಾರೆ



ದಾವಣಗೆರೆ ತಾಲ್ಲೂಕು ಕಾಟೇಹಳ್ಳಿ ಗ್ರಾಮದ ವಾಸಿ

**ರಾಜಪ್ಪ (56 ವರ್ಷ)**

ಇವರು ದಿನಾಂಕ 1.8.2024ರಂದು ಬೆಳಿಗ್ಗೆ 11.45ಕ್ಕೆ ಕಾಣೆಯಾಗಿರುತ್ತಾರೆ.

ಇವರ ಸುಳಿವು ಯಾರಿಗಾದರೂ ಸಿಕ್ಕಲ್ಲಿ

- 99726 97915 • 81055 40311
- 91647 26944 • 98805 24181

ಈ ಮೊಬೈಲ್ ನಂ.ಗೆ ಸಂಪರ್ಕಿಸಲು ಕೋರಿದೆ

# ಪಿಎಸ್ಐ ಪರಶುರಾಮ ಆತ್ಮಹತ್ಯೆ

## ವರ್ಗಾವಣೆಗೆ ಶಾಸಕರಿಂದ ಲಂಚ ಆರೋಪ

ಯಾದಗಿರಿ, ಆ. 3 - ಸೈಬರ್ ಠಾಣೆ ಪಿಎಸ್ಐ ಪರಶುರಾಮ್ ಅವರು ವರ್ಗಾವಣೆಗಾಗಿ ಲಂಚದ ಒತ್ತಡಕ್ಕೆ ಸಿಲುಕಿ ಸಾವನ್ನಪ್ಪಿದ್ದಾರೆ ಎಂದು ಅವರ ಪತ್ನಿ ಶ್ವೇತಾ ದೂರು ನೀಡಿದ್ದಾರೆ.

ಈ ದೂರಿನ ಹಿನ್ನೆಲೆಯಲ್ಲಿ ಕಾಂಗ್ರೆಸ್ ಶಾಸಕ ಚೆನ್ನಾರೆಡ್ಡಿ ಪಾಟೀಲ್ ಹಾಗೂ ಪುತ್ರ ಪಂಪನಗೌಡ ವಿರುದ್ಧ ಜಾತಿ ನಿಂದನೆ ಆರೋಪದಡಿ ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಾದಗಿರಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಪಿಎಸ್ಐ ಪರಶುರಾಮ್ (35) ಅವರು ಅನುಮಾನಾಸ್ಪದವಾಗಿ ಸಾವಿಗೀಡಾಗಿದ್ದರು. ಆ. 2ರಂದು ಮಧ್ಯಾಹ್ನ ಅವರು ಊಟ ಮಾಡಿ ಪೊಲೀಸ್ ವಸತಿ ಗೃಹದಲ್ಲಿರುವ ತಮ್ಮ ರೂಮಿನಲ್ಲಿ ಮಲಗಿದ ನಂತರ ಪುನಃ ಮೇಲೆದ್ದಿಲ್ಲ. ವಸತಿಗೃಹದಲ್ಲಿದ್ದ ಇತರ ಪೊಲೀಸರು ಅವರನ್ನು ಮಾತನಾಡಿ ಸಿದಾಗ ಅವರು ಅಸುನೀಗಿರುವುದು ತಿಳಿದುಬಂದಿತ್ತು.



ನಂತರ ದೂರು ನೀಡಿರುವ ಪತ್ನಿ ಶ್ವೇತಾ, ಪರಶುರಾಮ್ ಅವರಿಗೆ ಕಳೆದ ಆರೇಳು ತಿಂಗಳ ಹಿಂದಷ್ಟೇ ಯಾದಗಿರಿ ನಗರ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲಾಗಿತ್ತು. ಈಗ ಪುನಃ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಲಾಗಿತ್ತು. ತಮ್ಮ ವರ್ಗಾವಣೆಯನ್ನು ರದ್ದುಗೊಳಿಸಲು ಅವರು (4ನೇ ಪುಟಕ್ಕೆ)

### ಪ್ರಕರಣದ ಕೂಲಂಕುಶ ತನಿಖೆ : ಪರಮೇಶ್ವರ್

ಬೆಂಗಳೂರು, ಆ. 3 - ಯಾದಗಿರಿಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ (ಪಿಎಸ್ಐ) ಪರಶುರಾಮ ಸಾವಿನ ಪ್ರಕರಣವನ್ನು ಕೂಲಂಕುಶ ತನಿಖೆ ನಡೆಸುವಂತೆ ಸೂಚನೆ ನೀಡಿರುವುದಾಗಿ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಿಎಸ್ಐ ಆತ್ಮಹತ್ಯೆ ಮಾಡಿಕೊಂಡಿಲ್ಲ. ಡೆತ್‌ನೋಟ್ ಬರೆದಿಟ್ಟಿಲ್ಲ. ವರ್ಗಾವಣೆ ವಿಚಾರಕ್ಕೆ ನೊಂದಿದ್ದರು (4ನೇ ಪುಟಕ್ಕೆ)




## ಇನ್ಸ್‌ಪೆಕ್ಟರ್ ಆತ್ಮಹತ್ಯೆ : ಚನ್ನಾರೆಡ್ಡಿ ವಿರುದ್ಧದ ಪ್ರಕರಣ ಸಿ.ಐ.ಡಿ.ಗೆ

ಯಾದಗಿರಿ, ಆ. 3 - ಸಬ್ ಇನ್ಸ್‌ಪೆಕ್ಟರ್ ಪರಶುರಾಮ್ ಸಾವಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ಚನ್ನಾರೆಡ್ಡಿ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ.

ಇನ್ಸ್‌ಪೆಕ್ಟರ್ ವರ್ಗಾವಣೆಗೆ ಚೆನ್ನಾರೆಡ್ಡಿ ಮಗ ಪಂಪನಗೌಡ ತನ್ನೂರು 30 ಲಕ್ಷ ರೂಪಾಯಿಗಳ ಲಂಚ ಕೇಳಿದ್ದಾಗಿ ಆರೋಪಿಸಲಾಗಿತ್ತು. ಈ ಕಾರಣಕ್ಕಾಗಿ ಪರಶುರಾಮ್ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಅವರ ಪತ್ನಿ ಎನ್.ವಿ. ಶ್ವೇತ ದೂರಿದ್ದರು. ಈ ಹಿನ್ನೆಲೆಯಲ್ಲಿ ಶಾಸಕ ಚನ್ನಾರೆಡ್ಡಿ ಹಾಗೂ ಪುತ್ರನ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿತ್ತು. ಈ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ ಎಂದು ಗೃಹ ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ.






# ಕೋಚಿಂಗ್ ಕೇಂದ್ರಗಳಿಗೆ ಸಮಗ್ರ ನೀತಿಗೆ ಆಗ್ರಹ

ನವದೆಹಲಿ, ಆ. 3 - ನಾಯಿ ಕೊಡೆಗಳಂತೆ ಬೆಳೆಯುತ್ತಿರುವ ಕೋಚಿಂಗ್ ಕೇಂದ್ರಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಸಮಗ್ರ ನೀತಿ ರೂಪಿಸಬೇಕಿದೆ ಎಂದು ಕಾಂಗ್ರೆಸ್ ಹೇಳಿದೆ.

ಈ ಬಗ್ಗೆ ಮಾತನಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜಯರಾಮ್ ರಮೇಶ್, ಕೋಚಿಂಗ್ ಕೇಂದ್ರಗಳ ಹಾವಳಿ ತಪ್ಪಿಸಬೇಕಾದರೆ ಪಠ್ಯದಲ್ಲಿ ಪರಿಷ್ಕರಣೆ, ಪರೀಕ್ಷಾರ್ಥಿಗಳಿಗೆ ಹೆಚ್ಚು ಸಂಪನ್ಮೂಲ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಹೂಡಿಕೆಯ ಅಗತ್ಯವಿದೆ ಎಂದು ಹೇಳಿದ್ದಾರೆ. ಕೋಚಿಂಗ್ ಕೇಂದ್ರಗಳಿಂದ ಬರುವ ಜಿಎಸ್‌ಟಿ ತೆರಿಗೆ 2019 ರಲ್ಲಿ 2,241 ಕೋಟಿ ರೂಪಾಯಿ ಆಗಿತ್ತು. ಇದು 2024ರ ವೇಳೆಗೆ 5,517 ಕೋಟಿ ರೂ.ಗಳಿಗೆ ತಲುಪಿದೆ. ಇದು ಕೋಚಿಂಗ್ ಕೇಂದ್ರಗಳ ಮಾರುಕಟ್ಟೆ 30,000 ಕೋಟಿ ರೂ. ಮಟ್ಟಕ್ಕೆ ತಲುಪಿರುವುದನ್ನು ತೋರಿಸುತ್ತದೆ. ಇದು ಕಳವಳಕಾರಿ ಸಂಕೇತ ಎಂದು ರಮೇಶ್ ಹೇಳಿದ್ದಾರೆ.

# ಜಿಲ್ಲಾ ಕಾಂಗ್ರೆಸ್ ನಿಂದ ಇಂದು ಚೊಂಬು ಹಿಡಿದು ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ

ದಾವಣಗೆರೆ, ಆ. 3- ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಭದ್ರ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ ಅನುದಾನ ಬಿಡುಗಡೆ ಮಾಡದಿರುವುದು ಮತ್ತು ಭಾರತ್ ಅಕ್ಕಿ ನೀಡದಿರುವುದನ್ನು ಖಂಡಿಸಿ, ನಾಳೆ ದಿನಾಂಕ 4 ರ ಭಾನುವಾರ ಬೆಳಿಗ್ಗೆ 11.30 ಕ್ಕೆ ಚೊಂಬು ಹಿಡಿದು ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಮೆರವಣಿಗೆ ಹೊರಟು, ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ನಂತರ ಜಿಲ್ಲಾ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದರು.

ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ಬಿಡುಗಡೆ ಮಾಡದಿರುವುದು ಮತ್ತು ಭಾರತ್ ಅಕ್ಕಿ ನೀಡದಿರುವುದು ಖಂಡನೀಯ ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ನೇತೃತ್ವದಲ್ಲಿ ಪ್ರತಿಭಟನೆ ಹಾಗೂ ಚಂಬು ಹಿಡಿದು ಬಿಜೆಪಿ ಕಚೇರಿ ಮುತ್ತಿಗೆ ಹಾಕಲಾಗುವುದು.

ಎಡಬಿಡದೆ ಬೀಳುತ್ತಿರುವ ಮಳೆ ಮತ್ತು 144 ನೇ ಸೆಕ್ಷನ್ ಜಾರಿ ಹಿನ್ನೆಲೆಯಲ್ಲಿ ನಾಳಿನ ಬಾಗಿನ ಅರ್ಪಿಸುವ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೆ.ಜಿ. ಶಿವಕುಮಾರ್, ಅಯೂಬ್ ಪೈಲ್ವಾನ್, ಮಂಜಮ್ಮ, ಆರೀಫ್ ಖಾನ್, ಜಬ್ಬಾರ್, ಶುಭಮಂಗಳ, ರಾಜೇಶ್ವರಿ, ಹರೀಶ್, ಯುವರಾಜ್, ದಾಕ್ಷಾಯಿಣಮ್ಮ, ಮಂಗಳ ಮತ್ತಿತರರಿದ್ದರು.

# ಕ್ಯಾಸೇನಹಳ್ಳಿ ಗ್ರಾ.ಪಂ. ಅಧ್ಯಕ್ಷರಾಗಿ ನಾಗರತ್ನಮ್ಮ

ಜಗಳೂರು, ಆ. 3 - ತಾಲ್ಲೂಕಿನ ಕ್ಯಾಸೇನಹಳ್ಳಿ ಗ್ರಾ.ಪಂ. ನೂತನ ಅಧ್ಯಕ್ಷರಾಗಿ ಎಸ್. ನಾಗರತ್ನಮ್ಮ ಅಜ್ಜಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎಸ್.ಸಿ. ಮೀಸಲು ತೆರವಾದ ಅಧ್ಯಕ್ಷ ಸ್ಥಾನಕ್ಕೆ ಒಟ್ಟು 18 ಜನ ಗ್ರಾ.ಪಂ.ಸದಸ್ಯರಲ್ಲಿ ನಾಗರತ್ನಮ್ಮ ಒಬ್ಬರೇ ಉಮೇದುವಾರಿಕೆ ಸಲ್ಲಿಸಿದ್ದರು. ನಾಮಪತ್ರ ದಾಖಲೆಗಳು ಊರ್ಜಿತವಾಗಿದ್ದು, ಸರ್ವಾನುಮತದಿಂದ ಅವಿರೋಧ ವಾಗಿ ಆಯ್ಕೆ ಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಮಲ್ಲೇಶ್ ನಾಯ್ಕ್ ಅವರು ಘೋಷಿಸಿದರು.



# ಆರೂಢ ದಾಸೋಹಿಗಳ ಸಂಖ್ಯೆ ಹೆಚ್ಚಾಗಲಿ

## 'ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಚನಾನಂದ ಶ್ರೀ



ದಾವಣಗೆರೆ, ಆ.3- ಸಮಾಜದಲ್ಲಿ ಆರೂಢ ದಾಸೋಹಿಗಳ ಸಂಖ್ಯೆ ಹೆಚ್ಚಾಗಲಿ ಎಂದು ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ ಆಶಿಸಿದರು.

ಇಂದಿಲ್ಲಿ ಕನ್ನಡ ಭವನದಲ್ಲಿ ಏರ್ಪಾಡಾಗಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ ಸ್ಥಾಪಿತ ರಾಜ್ಯಮಟ್ಟದ 'ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ' ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಆರೂಢ ಸ್ಥಿತಿಯಲ್ಲಿದ್ದು ದಾಸೋಹ ಮಾಡಿದವರು ಶರಣ ಮಾಗನೂರು ಬಸಪ್ಪ ಅವರು. ಅವರದ್ದು ಸಮರ್ಪಣಾ ಭಾವ. ಇಂತಹ ಆರೂಢ ದಾಸೋಹಿಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗಲಿ ಎಂದರು.

ಅರ್ಜಿ ಹಾಕಿ ಪಡೆಯುವುದು ಪ್ರಶಸ್ತಿಯಲ್ಲ. ಪ್ರಶಸ್ತಿಗಳು ಬಯಸದೇ ಬಂದ ಭಾಗ್ಯವಾಗಬೇಕು. ಈ ನಿಟ್ಟಿನಲ್ಲಿ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡುವ ಕಾರ್ಯ ಶ್ಲಾಘನೀಯ ಎಂದರು.

ಪ್ರಸ್ತುತ ದಿನಗಳಲ್ಲಿ ಗುರುಗಳು ಮನೆಗೆ ಬಂದು ಪೂಜೆ-ಪ್ರಸಾದ ಸ್ವೀಕರಿಸಿದರೆ ಧನ್ಯರಾಗುತ್ತೇವೆ ಎಂಬ ಭಾವನೆ ಇದೆ. ಆದರೆ ತನು, ಮನ, ಭಾವ ಶುದ್ಧ ಇರುವ ಭಕ್ತರ ಮನೆಯಲ್ಲಿ ಯಾವಶರಣಪೂಜೆ-ಪ್ರಸಾದಸ್ವೀಕರಿಸುತ್ತಾನೋ ಅಂತಹ ಶರಣನೇ ಪುಣ್ಯವಂತ ಎಂದು ಬಸವಣ್ಣ ಹೇಳಿದ್ದರು. ಮಾಗನೂರು ಬಸಪ್ಪ ಅಂತಹ ಭಕ್ತರಲ್ಲೊಬ್ಬರು ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಧಾರವಾಡದ ವಚನ ಸಾಹಿತ್ಯ ಸಂಶೋಧಕ ಡಾ.ವೀರಣ್ಣ ಬಿ. ರಾಜೂರ, ಮಾಗನೂರು ಬಸಪ್ಪನವರ ಹೆಸರಿನಲ್ಲಿ ನೀಡುತ್ತಿರುವ ಈ ಪ್ರಶಸ್ತಿಯನ್ನು ಪ್ರಸಾದದ ರೂಪದಲ್ಲಿ ಸ್ವೀಕರಿಸುತ್ತೇನೆ ಎಂದರು.

ಮಾಗನೂರು ಬಸಪ್ಪ ಅವರು ಶಿಕ್ಷಣ, ಸಾಹಿತ್ಯ, ಸಮಾಜ ಸೇವೆ, ಕಾಯಕ ನಿಷ್ಠೆ, ಧರ್ಮ ನಿಷ್ಠೇ ಹೀಗೆ ಎಲ್ಲಾ ಬಗೆಯ ವಿಶೇಷಗಳ ಸಂಗಮವಾಗಿದ್ದಾರೆ ಎಂದರು.

ಇಂದು ವಚನ ಸಾಹಿತ್ಯವನ್ನು ಅಪಮೌಲ್ಯಗೊಳಿಸುವ ಕೆಲಸ ನಡೆಯುತ್ತಿದೆ. ಶರಣರದ್ದು ಬಂಡಾಯವೇ ಅಲ್ಲ ಎಂದು ಹೇಳಲಾಗುತ್ತಿದೆ. ಆದರೆ ನಿಜವಾದ ಬಂಡಾಯಗಾರರು ಎಂದರೆ ಅದು ಶರಣರು. ವಚನಗಳಿಗೆ ಸಾವಿಲ್ಲ ಅವುಗಳನ್ನು ಅಪಮೌಲ್ಯಗೊಳಿಸುವ ಕೆಲಸಕ್ಕೆ ಕೈ ಹಾಕಬಾರದು ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಅಭಿನಂದನಾ ನುಡಿಗಳನ್ನಾಡುತ್ತಾ, ಮಾಗನೂರು ಬಸಪ್ಪ ಅವರು ಶರಣರ ವಾಣಿಯಂತೆ ಬದುಕಿದವರು. ತನಗಾಗಿ ಬದುಕದೇ ಇತರರಿಗಾಗಿ ಬದುಕಿದ ಅವರು ಅನರ್ಘ್ಯ ರತ್ನ ಎಂದು ಬಣ್ಣಿಸಿದರು.

ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಶಾಲಾ-ಕಾಲೇಜುಗಳಲ್ಲಿ ಕನ್ನಡ ಭಾಷೆಯ ಕಷ್ಟವಾದ ವಿಷಯವಾಗಿದೆ.

ಪೋಷಕರು ಮಕ್ಕಳಿಗೆ ಕನ್ನಡ ಭಾಷೆಯ ಬಗ್ಗೆ ತಿಳಿಸದೆ ಕೇವಲ ಅಂಕ ಗಳಿಕೆಯ ಹಿಂದೆ ಬಿದ್ದಿರುವುದೇ ಇದಕ್ಕೆ ಕಾರಣ ಎಂದರು.

ಸರಳವಾಗಿರುವ ವಚನಗಳನ್ನು ಅರ್ಥೈಸಿಕೊಂಡು ಜೀವನದಲ್ಲಿ ಅವುಗಳ ತತ್ವ ಅಳವಡಿಸಿಕೊಂಡು ನಡೆದರೆ ಜೀವನದಲ್ಲಿ ನೆಮ್ಮದಿ ಕಾಣಲು ಸಾಧ್ಯವಿದೆ ಎಂದರು.

ಲಿಂಗಾಯತ ಧರ್ಮದ ಆಚರಣೆಗಳು ವೈಜ್ಞಾನಿಕ ಆಧಾರಿತವಾಗಿವೆ. ಲಿಂಗಧಾರಣೆ, ವಿಭೂತಿ ಧರಿಸುವುದು ಮೊದಲಾದ ಆಚರಣೆಗಳ ಹಿಂದೆ ಬಲವಾದ ವೈಜ್ಞಾನಿತ ತಳಹದಿ ಇದೆ. ಇಂಥಹ ಸಂಸ್ಕೃತಿ ಆಚಾರ ವಿಚಾರಗಳನ್ನು ಪೋಷಕರು ಮಕ್ಕಳಿಗೆ ತಿಳಿಸಿಕೊಡಬೇಕು ಎಂದು ಕರೆ ನೀಡಿದರು.

ಸಿರಿಗೆರೆ ತರಳಬಾಳು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಡಾ.ಎಚ್.ಬಿ.ವಾಮದೇವಪ್ಪ ಮಾಗನೂರು ಬಸಪ್ಪ ಅವರ ವ್ಯಕ್ತಿತ್ವ ಪರಿಚಯ ಮಾಡಿಕೊಡುತ್ತಾ, ವಚನಗಳನ್ನೇ ತಮ್ಮ ಜೀನವದ ಉಸಿರಾಗಿಸಿಕೊಂಡು ಬಾಳಿದ ಮಾಗನೂರು ಬಸಪ್ಪ ಅವರ ಜೀನವೇ ಇಂದಿನ ಪೀಳಿಗೆಗೆ ಸಂದೇಶವಾಗಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಮಾತನಾಡಿ, ನರ ಮಾನವ ಹರಮಾನವನಾಗಬೇಕಾದರೆ ಬಸವಣ್ಣನವರ ತತ್ವಗಳನ್ನು ಮೈಗೂಡಿಸಿಕೊಳ್ಳಬೇಕು. ಮನೆತನದ ಹೆಸರು ಉಳಿಯಬೇಕಾದರೆ ಮಕ್ಕಳಿಗೆ ಸಂಸ್ಕೃತಿಯನ್ನು ಅಕ್ಕರೆಯಿಂದ ಧಾರೆ ಎರೆಯಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಗನೂರು ಬಸಪ್ಪ ಪ್ರತಿಷ್ಠಾನದ ಅಧ್ಯಕ್ಷ ಎಂ.ಬಿ. ಸಂಗಮೇಶ್ವರ ಗೌಡ ಮಾತನಾಡಿ, ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಬರುವ ವರ್ಷದಿಂದ ಬೇರೆ ಜಿಲ್ಲೆಯಲ್ಲಿಯೂ ಕಾರ್ಯಕ್ರಮ ನಡೆಸಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ವಾಮದೇವಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಮಾಗನೂರು ಬಸಪ್ಪ ಅವರ ಆತ್ಮ ಚರಿತ್ರೆಯನ್ನು ಪ್ರತಿಯೊಬ್ಬರೂ ಓದಬೇಕು ಎಂದರು. ಆದಷ್ಟು ಶೀಘ್ರವಾಗಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವೂ ದಾವಣಗೆರೆಯಲ್ಲಿ ನಡೆಯಲಿ ಎಂಬ ಆಶಯ ವ್ಯಕ್ತಪಡಿಸಿದರು.

ಶ್ರೀಮತಿ ಸುನಂದ ಉಪಸ್ಥಿತರಿದ್ದರು. ಮಾಗನೂರು ಬಸಪ್ಪ ಶಾಲಾ ವಿದ್ಯಾರ್ಥಿಗಳು ನೃತ್ಯರೂಪಕ ನಡೆಸಿಕೊಟ್ಟರು. ಕಸಾಪ ಗೌರವ ಕಾರ್ಯದರ್ಶಿ ದಿಳ್ಯಪ್ಪ ಸ್ವಾಗತಿಸಿದರು.

# ನಗರದ ಶ್ರೀ ದಾನಮ್ಮ ದೇವಸ್ಥಾನದಲ್ಲಿ ಇಂದು ನಾಗರ ಅಮಾವಾಸ್ಯೆ




ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮದೇವಿ ದೇವಸ್ಥಾನದಲ್ಲಿ ನಾಗರ ಅಮಾವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಹೂವಿನ ಅಲಂಕಾರ ನಡೆಯಲಿದೆ. ನಂತರ ಮಧ್ಯಾಹ್ನ 12.30ಕ್ಕೆ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ. ಗೌಡ್ರ ಜಯದೇವಪ್ಪ ಮತ್ತು ಮಕ್ಕಳು, ಕೆ.ಎಂ. ರವಿಶಂಕರ್ ಮತ್ತು ಮಕ್ಕಳು, ರವಿ ಬೆಣ್ಣೆ ದೋಸೆ ಹೋಟೆಲ್, ಕರಿಬಸವರಾಜು ಮುಂಡರಗಿ ಮತ್ತು ಮಕ್ಕಳು, ದಾವಣಗೆರೆ. ಶ್ರೀಮತಿ ಶೋಭಾ ಹಾಲೇಶಪ್ಪ, ಮಕ್ಕಳು, ಸೊಸೆಯಂದಿರು, ಹೆಮ್ಮನಬೇತೂರು ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

# ನಗರದಲ್ಲಿ ಇಂದು ಅಜ್ಜಂಪುರ ಶೆಟ್ರು ಪ್ರತಿಭಾ ಪ್ರತಿಷ್ಠಾನದಿಂದ ಪ್ರತಿಭಾ ಪುರಸ್ಕಾರ

ಲಿಂ. ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳ ನೆನಪಿನಲ್ಲಿ ಸಿದ್ದರಾಮಣ್ಣ ಶೆಟ್ರು, ಸಿದ್ದಪ್ಪ ಶೆಟ್ರು, ಸಿದ್ದಮಲ್ಲಪ್ಪ ಶೆಟ್ರು, ಸಂಗಪ್ಪ ಶೆಟ್ರು, ಗುರುಸಿದ್ದಪ್ಪ ಶೆಟ್ರು ಇವರುಗಳ ಸ್ಮರಣಾರ್ಥ ಅಜ್ಜಂಪುರ ಶೆಟ್ರು ಪ್ರತಿಭಾ ಪ್ರತಿಷ್ಠಾನದಿಂದ ಇಂದು 10 ಗಂಟೆಗೆ ಶ್ರೀಮತಿ ಚನ್ನಬಸಮ್ಮ ವೀರಮ್ಮ ಕಲ್ಯಾಣ ಮಂಟಪದಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ.

2023-24ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಏರ್ಪಡಿಸಿರುವ 19ನೇ ಪ್ರತಿಭಾ ಪುರಸ್ಕಾರ ಸಮಾರಂಭದ ಅಧ್ಯಕ್ಷತೆಯನ್ನು ಬಸವ ಬಳಗದ ಅಧ್ಯಕ್ಷ ಎ.ಹೆಚ್. ಹುಚ್ಚಪ್ಪ ಮೇಷ್ಟ್ರು ವಹಿಸಲಿದ್ದಾರೆ. ವೈದ್ಯ ಡಾ. ಎಸ್.ಎಂ. ಎಲಿ ಅವರ ಸಮ್ಮುಖದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಜಿ.ಎಲ್. ತ್ರಿಪುರಾಂತಕ ಅವರು ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳ ಜೀವನ ಕುರಿತ ಹಾಗೂ ವಿದ್ಯಾರ್ಥಿಗಳಿಗೆ ಜೀವನದ ಮೌಲ್ಯಗಳ ಕುರಿತು ಹಾಗೂ ಶ್ರೀಮತಿ ಕೆ.ಎಂ. ಗಿರಿಜಾ ಅವರು ವಿದ್ಯಾರ್ಥಿಗಳಿಗೆ ಮುಂದಿನ ಗುರಿಗಳ ಬಗ್ಗೆ ಕುರಿತು ಮಾತನಾಡುವರು.

# ನಗರದಲ್ಲಿ ಇಂದು ಅಭಿನಂದನಾ ಸಮಾರಂಭ





ಬೆಂಗಳೂರು ಪ್ರಾಥಮಿಕ ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕ ಎಂ.ಎಸ್. ಪ್ರಸನ್ನ ಕುಮಾರ್ ಹಾಗೂ ಜಮಖಂಡಿ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಸಹ ನಿರ್ದೇಶಕ ಜಿ. ಆರ್. ತಿಪ್ಪೇಶಪ್ಪ ಅವರುಗಳಿಗೆ ಇಂದು ಬೆಳಿಗ್ಗೆ 10 ಗಂಟೆಗೆ ಅಥಣಿ ಎಸ್. ಬಿ. ಸಿ. ಕಾಲೇಜಿನಲ್ಲಿ ಅಭಿನಂದನಾ ಸಮಾರಂಭ ನಡೆಯಲಿದೆ.

ಉರ್ದು ಹಾಗೂ ಇತರೆ ಭಾಷಾ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶಕ ಬಿ. ಎಸ್. ರಘುವೀರ್ ಕಾರ್ಯಕ್ರಮವನ್ನು ಉದ್ಘಾಟಿಸಿ, ಅಭಿನಂದನಾ ನುಡಿಗಳನ್ನಾಡುವರು. ಅಧ್ಯಕ್ಷತೆಯನ್ನು ಜಿಲ್ಲೆಯ ಉಪನಿರ್ದೇಶಕ ಜಿ. ಕೊಟ್ರೇಶ್ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಯಟ್ ಪ್ರಾಚಾರ್ಯರಾದ ಶ್ರೀಮತಿ ಗೀತಾ, ಎಸ್.ಬಿ.ಸಿ. ಕಾಲೇಜಿನ ಪ್ರಾಚಾರ್ಯ ಡಾ. ಕೆ. ಷಣ್ಮುಖ ಉಪಸ್ಥಿತರಿರುವರು. ಶ್ರೀಯುತರುಗಳು ದಾವಣಗೆರೆ ಜಿಲ್ಲೆಯವರಾಗಿದ್ದು, ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ಪರ ಕೆಲಸಗಳನ್ನು ನಿರ್ವಹಿಸಿ, ಶಿಕ್ಷಕರ ಅಭಿಮಾನಕ್ಕೆ ಪಾತ್ರರಾದ ಅವರನ್ನು ಅಭಿನಂದಿಸಲಾಗುವುದು ಎಂದು ಅಭಿಮಾನಿ ಬಳಗದ ಕೆ.ಜಿ. ಶಿವಶಂಕರ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು 'ಕಾವ್ಯ ಕುಂಚ' ಕವನ ಸಂಕಲನ ಬಿಡುಗಡೆ

ದಾವಣಗೆರೆ, ಆ.3- 'ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ನಾಳೆ ದಿನಾಂಕ 4 ರ ಭಾನುವಾರ ಕುವೆಂಪು ಕನ್ನಡ ಭವನದಲ್ಲಿ 'ಕಾವ್ಯ ಕುಂಚ' ಕವನ ಸಂಕಲನ ಲೋಕಾರ್ಪಣೆ ಹಾಗೂ 'ಸುವರ್ಣ ಕರ್ನಾಟಕ ಕಣ್ಮಣಿ' ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕ್ಕೊಳ್ಳಲಾಗಿದೆ ಎಂದು ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಿಗ್ಗೆ 9 ರಿಂದ 11 ರವರೆಗೆ ರಾಜ್ಯ ಮಟ್ಟದ ಕವಿಗೋಷ್ಠಿ ನಡೆಯಲಿದೆ. 11 ಗಂಟೆಗೆ ಕಾವ್ಯ ಕುಂಚ ಭಾಗ-4ರ ಕವನ ಸಂಕಲನ ಲೋಕಾರ್ಪಣೆ ಸಮಾರಂಭ ನಡೆಯಲಿದೆ.


ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಕವನ ಸಂಕಲನ ಲೋಕಾರ್ಪಣೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹುಬ್ಬಳ್ಳಿಯ ಭಾವ ಸಂಗಮ ಸಾಹಿತ್ಯ, ಸಾಂಸ್ಕೃತಿಕ ವೇದಿಕೆ ಸಂಸ್ಥಾಪಕ ರಾಜೇಂದ್ರ ಪಾಟೀಲ್, ರಾಯಚೂರಿನ ಶ್ರೀ ಸಿದ್ದೇಶ್ವರ ಸಾಹಿತ್ಯ ವೇದಿಕೆಯ ಸಂಸ್ಥಾಪಕರಾದ ಗಿರಿಜಾ ಮಾಲಿ ಪಾಟೀಲ್ ಆಗಮಿಸಲಿದ್ದಾರೆ. ಕವನ ಸಂಕಲನದ ಸಹ ಸಂಪಾದಕರೂ, ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ಉಪಸ್ಥಿತರಿರಲಿದ್ದಾರೆ ಎಂದರು.

ಮಧ್ಯಾಹ್ನ 3 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ 115 ಸಾಧಕರಿಗೆ 'ಸುವರ್ಣ ಕರ್ನಾಟಕ ಕಣ್ಮಣಿ' ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಮಧ್ಯಾಹ್ನ 3 ಗಂಟೆಗೆ ನಾಡಿನ ವಿವಿಧ ಜಿಲ್ಲೆಗಳ ವಿವಿಧ ಕ್ಷೇತ್ರಗಳ ಸಾಧಕರಿಗೆ ಕರ್ನಾಟಕ ರಾಜ್ಯವಾಗಿ ಐವತ್ತು ವರ್ಷ ಆದ ಪ್ರಯುಕ್ತ ಸುಮಾರು 115 ಸಾಧಕರಿಗೆ 'ಸುವರ್ಣ ಕರ್ನಾಟಕ ಕಣ್ಮಣಿ' ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕ್ಕೊಂಡಿದ್ದು, ಸಮಾರಂಭದ ಉದ್ಘಾಟನೆಯನ್ನು ಧಾರವಾಡದ ಹಿರಿಯ ಸಾಹಿತಿ, ರಂಗಕರ್ಮಿ, ಡಾ. ಹೇಮಾ ಪಟ್ಟಣಶೆಟ್ಟಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಜ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಆಗಮಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಹೆಚ್. ಮಂಜುನಾಥ್, ಜ್ಯೋತಿ ಗಣೇಶ್ ಶೆಣೈ, ಹೇಮಾ ಶಾಂತಪ್ಪ ಪೂಜಾರಿ, ವಸಂತಿ ಮಂಜುನಾಥ್, ಬಿ.ಶಾಂತಪ್ಪ ಪೂಜಾರಿ, ಕೆ.ಸಿ. ಉಮೇಶ್ ಇತರರು ಉಪಸ್ಥಿತರಿದ್ದರು.

# ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಅಮಾವಾಸ್ಯೆ ಪೂಜೆ



ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಭೀಮನ ಅಮಾವಾಸ್ಯೆ ಪೂಜಾ ಕಾರ್ಯಕ್ರಮಗಳು ಇಂದು ನಡೆಯಲಿವೆ. ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ, ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಮಂಗಳ ಮತ್ತು ಅಜಯ್‌ಕುಮಾರ್ ಮತ್ತು ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ನಗರದಲ್ಲಿ ಇಂದಿನಿಂದ ಶ್ರಾವಣದ ಪ್ರವಚನ

ದಾವಣಗೆರೆ, ಆ.3- ಶ್ರಾವಣ ಮಾಸದ ಅಂಗವಾಗಿ ಬಸವ ಕೇಂದ್ರ, ಶ್ರೀ ಮುರುಘರಾಜೇಂದ್ರ ವಿರಕ್ತಮಠ ಹಾಗೂ ಶ್ರೀಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ನಗರದ ವಿರಕ್ತಮಠದಲ್ಲಿ ನಾಳೆ ದಿನಾಂಕ 4ರಿಂದ ಬರುವ ಸೆಪ್ಟೆಂಬರ್ 3ರವರೆಗೆ ಕಲ್ಯಾಣದಿಂದ ಉಳವಿಯೆಡೆಗೆ ಪ್ರವಚನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ವಿರಕ್ತಮಠ ಧರ್ಮದರ್ಶಿ ಸಮಿತಿ ಕಾರ್ಯದರ್ಶಿ ಕಣಕುಪ್ಪಿ ಮುರುಗೇಶಪ್ಪ ಮಾತನಾಡಿ, ನಾಳೆ ದಿನಾಂಕ 4ರ ಸಂಜೆ 6 ಗಂಟೆಗೆ ಶ್ರೀ ಬಸವಪ್ರಭು ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಹಾಗೂ ಗುರುಮಠಕಲ್ ಖಾಸಾ ಮಠದ ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರವಚನವನ್ನು ಯುವ ಮುಖಂಡ ಎಚ್.ಎಸ್. ನಾಗರಾಜ್ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್, ಪಾಲಿಕೆ ಮಾಜಿ ಸದಸ್ಯ ಎಸ್.ಬಸಪ್ಪ ಆಗಮಿಸುವರು. ಮುರುಘರಾಜೇಂದ್ರ ವಿದ್ಯಾವರ್ಧಕ ಫಂಡ್ ಕಾರ್ಯದರ್ಶಿ ಎಂ.ಜಯಕುಮಾರ್, ಟ್ರಸ್ಟ್ ಕಾರ್ಯದರ್ಶಿ ಅಂದನೂರು ಮುಪ್ಪಣ್ಣ ಉಪಸ್ಥಿತರಿರಲಿದ್ದಾರೆ.

ಪ್ರತಿದಿನ ಸಂಜೆ 6.30ರಿಂದ 8ರವರೆಗೆ ಮೈಸೂರು ಬಸವ ಧ್ಯಾನ ಮಂದಿರದ ಶ್ರೀ ಬಸವಲಿಂಗಮೂರ್ತಿ ಸ್ವಾಮೀಜಿ ಪ್ರವಚನ ನೀಡುವರು. ಬಸವ ಕಲಾ ಲೋಕದ ಕಲಾವಿದರು ವಚನ ಗಾಯನ ನಡೆಸುವರು.

ಇದೇ ದಿನಾಂಕ 8ರಂದು ಸಂಜೆ 4 ಗಂಟೆಗೆ ವಿರಕ್ತಮಠದಲ್ಲಿ ಮಹಿಳಾ ಬಸವ ಕೇಂದ್ರದಿಂದ ಶ್ರೀ ಬಸವಪ್ರಭು ಸ್ವಾಮೀಜಿ ನೇತೃತ್ವದಲ್ಲಿ ಕಲ್ಲು ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲಾಗಲಿ ಎಂಬ ಘೋಷ ವಾಕ್ಯದೊಂದಿಗೆ ಹಾಲು ಕುಡಿಸುವ ಹಬ್ಬ ಬಸವ ಪಂಚಮಿ ಆಚರಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹಾಸಬಾವಿ ಕರಿಬಸಪ್ಪ, ಬಾಳೆಕಾಯಿ ಮುರುಗೇಶಪ್ಪ, ಎಸ್.ಡಿ. ಸಂಗಪ್ಪ, ಬಿ.ವಿರೂಪಾಕ್ಷಪ್ಪ ಇದ್ದರು.


URGENT REQUIREMENT
(DIRECT SELECTION)
COMPANY : SRI EXCELLENCE ELECTRICALS
Job : Electrician (ITI or Diploma Electrical)
Experience Required :
3 to 5 years with Experience Letter
Salary : 12 to 14 Thousand
Work Location : NEAR HARIHAR
Contact : HR : 86608 77132






# ಶಿರಸಿ, ಜೋಗಫಾಲ್ಸ್ ವೀಕ್ಷಣೆಗೆ ಕೆಎಸ್‌ಆರ್‌ಟಿಸಿ ವಿಶೇಷ ಪ್ಯಾಕೇಜ್



ದಾವಣಗೆರೆ, ಆ.3- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಆ.3 ರಿಂದ ಪ್ರತಿ ಶನಿವಾರ ಮತ್ತು ಭಾನುವಾರ ರಜಾ ದಿನಗಳಂದು ದಾವಣಗೆರೆ ಹಾಗೂ ಹರಿಹರದಿಂದ ವಿಶ್ವ ವಿಖ್ಯಾತ ಪ್ರೇಕ್ಷಣೀಯ ಸ್ಥಳವಾದ ಶಿರಸಿ, ಜೋಗಫಾಲ್ಸ್ ವೀಕ್ಷಣೆಗೆ ವಿಶೇಷ ಪ್ಯಾಕೇಜ್‌ನೊಂದಿಗೆ ರಾಜಹಂಸ ಹಾಗೂ ವೇಗದೂತ (ಅಶ್ವಮೇಧ) ಸಾರಿಗೆಯನ್ನು ಕಾರ್ಯಾಚರಣೆಗೆ ಬಿಡಲಾಗುತ್ತಿದೆ. ಮುಂಗಡ ಬುಕ್ಕಿಂಗ್ ಕೌಂಟರ್‌ಗಳಲ್ಲಿ ಬುಕ್ಕಿಂಗ್ ಮಾಡಲು ಸೌಕರ್ಯ ಕಲ್ಪಿಸಲಾಗಿದೆ ಅಥವಾ ಆನ್‌ಲೈನ್ ಬುಕ್ಕಿಂಗ್‌ಗಾಗಿ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಸಾರಿಗೆ ಸೌಲಭ್ಯದ ಸದುಪಯೋಗ ಪಡೆದುಕೊಳ್ಳುವಂತೆ ವಿಭಾಗೀಯ ನಿಯಂತ್ರಕ ಸಿದ್ದೇಶ್ ಎನ್. ಹೆಬ್ಬಾಳ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂಡಸ್ಟ್ರಿಯಲ್ ಏರಿಯ ಲೋಕಿಕೆರೆ ರಸ್ತೆ, ಸುಬ್ರಹ್ಮಣ್ಯ ನಗರ, ಎಸ್.ಎ. ರವೀಂದ್ರನಾಥ ಬಡಾವಣೆ ಮತ್ತು ಸುತ್ತ ಮುತ್ತ ಪ್ರದೇಶಗಳು, ದೂರದರ್ಶನ ಕೇಂದ್ರ, ಮಹಾನಗರ ಪಾಲಿಕೆ ನೀರು ಸರಬರಾಜು ಘಟಕಗಳು, ಸರ್ಕ್ಯೂಟ್ ಹೌಸ್, ಭೂಸೇನಾ ನಿಗಮ, ಜಿಲ್ಲಾ ಪಂಚಾಯತ್ ಕಛೇರಿ, ಎಸ್.ಓ.ಜಿ ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ಧ, ಬಸವ ಭೀಮ ನಗರ , ಕರ್ನಾಟಕ ಬೀಜ ನಿಗಮ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


## ಕುರಿ - ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ಆ.3- ನಾಡಿದ್ದು ದಿನಾಂಕ 5 ಮತ್ತು 6 ರಂದು ನಗರದ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 08192-233787.

## ನಗರದಲ್ಲಿ ಇಂದು ಕೀಲು-ಮೂಳೆ ಶಿಬಿರ

ಕೀಲು-ಮೂಳೆಗಳ ಮತ್ತು ಇತರೆ ಆರೋಗ್ಯ ಉಚಿತ ಚಿಕಿತ್ಸಾ ಶಿಬಿರವು ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿರುವ ಅನುಪ ಆಸ್ಪತ್ರೆಯಲ್ಲಿ ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2ರವರೆಗೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ ; 96321-31626 ಅಥವಾ 78928-34138.


## ನಿಮಗೆ ಈ ಕೆಳಕಂಡ ಸಂಧಿವಾತದ ಲಕ್ಷಣಗಳಿವೆಯೇ ?



- ಕೈ ಕಾಲು ಗಂಟುಗಳಲ್ಲಿ ನೋವು ಮತ್ತು ಬಾವು ಇದೆಯೇ ?
- ನಿಮ್ಮ ಕೈ ಮತ್ತು ಕಾಲುಗಳ ಗಂಟುಗಳಲ್ಲಿ ವಿರೂಪ (Deformities)ಇದೆಯೇ ?
- ಬೆಳಿಗ್ಗೆ ಎದ್ದಾಗ ಸೊಂಟ ನೋವು ಮತ್ತು ಕತ್ತು ನೋವು ಇದೆಯೇ ?
- ಬೆನ್ನು ನೋವು ಮತ್ತು ಸೊಂಟ ನೋವಿನ ಜೊತೆಗೆ ಕಣ್ಣು ಕೆಂಪಾಗಿ ನೋಯುವುದೇ, ಅಥವಾ ಮಂಜಾಗಿ ಕಾಣುವುದೇ ?
- ಗಂಟು ನೋವಿನ ಕಾಯಿಲೆ ಇದನ್ನು ಪ್ರಾಥಮಿಕ ಹಂತದಲ್ಲಿಯೇ ಕಂಡು ಹಿಡಿದರೆ ನಿಯಂತ್ರಿಸಬಹುದು. ವಿರೂಪ (Deformities) ಆದವರಿಗೆ ಮುಂದೆ ಆಗುವ ತೊಂದರೆಯನ್ನು ತಡೆಯಬಹದು.

✓ RHEUMATOID ARTHRITIS ✓ ANKYLOSING SPONDYLITIS
✓ GOUT ✓ PSORATIC ARTHRITIS ✓ SLE

ಈ ಮೇಲ್ಕಂಡ ಲಕ್ಷಣಗಳ ಯಾವುದೇ ತೊಂದರೆ ಇದ್ದಲ್ಲಿ

ಡಾ. ಸೋಮಶೇಖರ್ (Rheumatologist) ಇವರು


ಆಗಸ್ಟ್ 07 ಬುಧವಾರ ಮತ್ತು ಆಗಸ್ಟ್ 08 ಗುರುವಾರ 2024

**ಅನುಗ್ರಹ ಹಾಸ್ಪಿಟಲ್** ಎಂ.ಸಿ.ಸಿ. 'ಬಿ' ಬ್ಲಾಕ್ ದಾವಣಗೆರೆಯಲ್ಲಿ ತಪಾಸಣೆಗೆ ಲಭ್ಯವಿರುತ್ತಾರೆ.

ಫೋ. : 08192 222292




## ಪುಣ್ಯಸ್ಮರಣೆ





**ಆರ್.ಕೆ. ನಾಯ್ಕ**
5ನೇ ವರ್ಷದ ಪುಣ್ಯಸ್ಮರಣೆ

**ಸೋಹನ್ ರಾಜ್ (ಸನ್ನಿ)**
1ನೇ ವರ್ಷದ ಪುಣ್ಯಸ್ಮರಣೆ

ನಮ್ಮೆಲ್ಲರಿಗೂ ದಾರಿದೀಪವಾಗಿ, ಬದುಕಿಗೆ ಪ್ರೇರಕರಾಗಿ ಭವಿಷ್ಯಕ್ಕೆ ಬೆಳಕಾಗಿ, ಆದರ್ಶರಾಗಿ ಬಾಳಿದ ನಿಮ್ಮ ನೆನಪು ಎಂದೆಂದಿಗೂ ನಮ್ಮಲ್ಲಿ ಅಜರಾಮರ...
ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವವರು.

ಶ್ರೀಮತಿ ಶಕುಂತಲ ಆರ್.ಕೆ. ನಾಯ್ಕ
ಮಗ : ಡಾ|| ಸಂದೀಪ್ ರಾಜ್ ನಾಯ್ಕ,
ಸೊಸೆ : ಶ್ರೀಮತಿ ಶೀತಲ್ ಡಾ|| ಸಂದೀಪ್ ರಾಜ್ ನಾಯ್ಕ
ಮಗಳು : ಶ್ರೀಮತಿ ಸ್ಫೂರ್ತಿ ನಾಯ್ಕ, ಅಳಿಯ : ಶ್ರೀ ಸೋಮ್ಲಾ ನಾಯ್ಕ
ಮೊಮ್ಮಕ್ಕಳು : ಶ್ರೇಯಾಂಕ್ ರಾಥೋಡ್, ಸಮರ್ಥ್ ರಾಥೋಡ್
ಆದಿತ್ಯ ನಾಯ್ಕ, ಅನಿಕಾ ಎಸ್. ನಾಯ್ಕ ಹಾಗೂ ಬಂಧು-ಮಿತ್ರರು
ಫೋನ್ : 70196 76027, 96323 38845





## ಹೃತ್ಪೂರ್ವಕ ಕೃತಜ್ಞತೆಗಳು

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಡಾ. ಶಾಮನೂರು ಶಿವಶಂಕರಪ್ಪಾಜಿಯವರು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು ದಾವಣಗೆರೆ ಲೋಕಸಭಾ ಸದಸ್ಯರಾದ ಸನ್ಮಾನ್ಯ ಡಾ|| ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್‌ರವರು ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಸನ್ಮಾನ್ಯ ಹೆಚ್.ಬಿ. ಮಂಜಪ್ಪನವರು ಹಾಗೂ ನೂತನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸನ್ಮಾನ್ಯ ದಿನೇಶ್ ಕೆ. ಶೆಟ್ಟಿ ಹಾಗೂ ದಾವಣಗೆರೆ ಉತ್ತರ ವಿಧಾನಸಭಾದ ಅಧ್ಯಕ್ಷರಾದ ಸನ್ಮಾನ್ಯ ಕೆ.ಜಿ. ಶಿವಕುಮಾರ್, ಅಧ್ಯಕ್ಷರು ದಾವಣಗೆರೆ ದಕ್ಷಿಣ ವಲಯ ಕಾಂಗ್ರೆಸ್ ಸಮಿತಿಯ ಸನ್ಮಾನ್ಯ ಅಯೂಬ್ ಪೈಲ್ವಾನ್ ಹಾಗೂ ಮೇಲ್ಕಂಡ ಹಿರಿಯರ ಆಶೀರ್ವಾದಿಂದ ನನ್ನನ್ನು ದಾವಣಗೆರೆ ಉತ್ತರ ವಲಯದ ಕಾಂಗ್ರೆಸ್ ಸಮಿತಿಯ ವಿಧಾನಸಭಾ ಕ್ಷೇತ್ರದ ಉಪಾಧ್ಯಕ್ಷನಾಗಿ ನೇಮಿಸಿರುವುದಕ್ಕೆ ಎಲ್ಲಾ ಹಿರಿಯರಿಗೂ ಮತ್ತು ಕಾಂಗ್ರೆಸ್ ಮುಖಂಡರುಗಳಿಗೂ, ನನ್ನ ಹಿತೈಷಿಗಳಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

**ಸಿದ್ದೇಶ್ ಸಿ. (ಸಿದ್ದೇಶ್ ಚಂದ್ರ)**
ಉಪಾಧ್ಯಕ್ಷರು, ದಾವಣಗೆರೆ ಉತ್ತರ ವಲಯ, ಕಾಂಗ್ರೆಸ್ ಸಮಿತಿ
ಫೋ. : 89704 11100, 98801 00102, 94838 51555

Reg.No.: DR:DVG:RSR/25770/2000-01 EST : 04.08.2000


## ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ

"ಶಿವಗೌರಿ", ಮೊದಲನೇ ಮಹಡಿ,
ಶ್ರೀ ಭೂತಚೌಡೇಶ್ವರಿ ದೇವಸ್ಥಾನದ ಪಕ್ಕ,
ರಿಂಗ್ ರಸ್ತೆ, ಶಾಂತಿನಗರ, ದಾವಣಗೆರೆ-6.
ಫೋ : 08192-356058, ಮೊ : 9844833876



ಜೆ. ಚೆಲುವಪ್ಪ
ಅಧ್ಯಕ್ಷರು

**25ನೇ ವರ್ಷಕ್ಕೆ ಪಾದಾರ್ಪಣೆ**
**24ನೇ ವಾರ್ಷಿಕೋತ್ಸವ**



ದಿ|| ಎನ್.ಜಿ. ಮೋಹನ್
ಉಪಾಧ್ಯಕ್ಷರು (ಮರಣ:21-07-2024)

ನಮ್ಮ ಸೊಸೈಟಿಯು ನಿಮ್ಮೆಲ್ಲರ ಸಹಕಾರದಿಂದ ದಿನಾಂಕ : 04-08-2024ಕ್ಕೆ 24 ವರ್ಷಗಳನ್ನು ಪೂರೈಸಿ, 25ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು, ಇದರ ಯಶಸ್ಸಿಗೆ ಕಾರಣಕರ್ತರಾದ ನಮ್ಮ ಸಂಘದ ಸರ್ವಸದಸ್ಯರಿಗೂ, ಸಂಘದ ಮೇಲೆ ವಿಶ್ವಾಸವಿಟ್ಟು ಠೇವಣಿ ಮಾಡಿದ ಠೇವಣಿದಾರರಿಗೆ, ಮಾರ್ಗದರ್ಶನ ನೀಡಿದ ಸಹಕಾರ ಸಂಘಗಳ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ, ಲೆಕ್ಕ ಪರಿಶೋಧಕರಿಗೂ, ತೆರಿಗೆ ಸಲಹೆಗಾರರಿಗೂ, ಸಂಘದ ವ್ಯವಹಾರ ಮಾಡಲು ಸಹಕರಿಸಿದ ವಿವಿಧ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಗೂ, ಸಂಘದ ಸಿಬ್ಬಂದಿ ವರ್ಗದವರಿಗೂ, ಸಂಘದ ಕಾನೂನು ಸಲಹೆಗಾರರಿಗೂ, ಸಂಘದ ಕಟ್ಟಡ ಮೌಲ್ಯ ಮಾಪಕರಿಗೂ, ಪಿಗ್ಮಿ ಸಂಗ್ರಹಕಾರರಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಂಘದ ಅಭಿವೃದ್ಧಿಗೆ ಕಾರಣರಾದವರೆಲ್ಲರಿಗೂ ನಮ್ಮ ಹೃದಯಪೂರ್ವಕ ಕೃತಜ್ಞತೆಗಳು.

ಸೊಸೈಟಿಯ ಕಛೇರಿಯಲ್ಲಿ ಬೆಳಿಗ್ಗೆ 10-00 ಕ್ಕೆ ಶ್ರೀ ಲಕ್ಷ್ಮಿ, ಸರಸ್ವತಿ ಮತ್ತು ವಿಘ್ನೇಶ್ವರ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರು ಆಗಮಿಸಬೇಕೆಂದು ವಿನಂತಿಸಲಾಗಿದೆ.

### ಸಂಘದ ಆರ್ಥಿಕ ಪ್ರಗತಿಯ ಪಕ್ಷಿನೋಟ

| ವಿವರಗಳು | 2020-2021 | 2021-2022 | 2022-2023 | 2023-2024 |
|---|---|---|---|---|
| ಸಂಘದ ಷೇರು ಬಂಡವಾಳ | 1,00,66,000-00 | 1,05,93,500-00 | 1,15,13,000-00 | 1,23,68,500-00 |
| ಸಂಘದ ಸದಸ್ಯರ ಸಂಖ್ಯೆ | 3101 | 3293 | 3518 | 3858 |
| ಠೇವಣಿಗಳು | 18,84,79,077-68 | 21,27,85,245-08 | 24,77,53,088-00 | 26,85,22,820-21 |
| ಸಾಲ ಮತ್ತು ಮುಂಗಡಗಳು | 16,39,73,788-00 | 17,44,15,205-00 | 19,10,05,088-00 | 20,89,33,037-00 |
| ಸಂಘದ ದುಡಿಯುವ ಬಂಡವಾಳ | 21,94,24,447-00 | 24,24,92,570-00 | 28,75,40,649-00 | 30,74,30,700-00 |
| ವಿನಿಯೋಗ (ಹೂಡಿಕೆಗಳು) | 4,98,85,549-00 | 6,20,78,104-00 | 7,37,07,517-00 | 8,15,19,857-00 |
| ಲಾಭ | 35,19,262-10 | 38,02,161-20 | 40,31,711-28 | 41,95,282-00(ತಾತ್ಕಾಲಿಕ) |
| ಲಾಭಾಂಶ | 12% | 14% | 14% | 14% ಉದ್ದೇಶಿತ |

### ಆಡಳಿತ ಮಂಡಳಿ ಸದಸ್ಯರು



ಜೆ.ಕೆ. ಶಿವಾನಂದ – ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ಹೆಚ್.ಬಿ. ಗೋಣಪ್ಪ – ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ಬಿ.ರಮೇಶ್(ಪಿ.ಜೆ) – ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ವಿ. ಮಂಜುನಾಥ – ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ರಮೇಶ್ ಬಿ. – ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು
ಎನ್. ನಿಂಗಪ್ಪ – ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು



ಹೆಚ್.ಸಿ. ವಾಣಿ – ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು
ಸುನಂದ ಮಂಜುನಾಥ – ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು
ಡಿ.ಬಿ. ಚಂದ್ರಪ್ಪ – ನಿರ್ದೇಶಕರು
ಎಸ್.ರವಿಸ್ವಾಮಿ – ವಿಶೇಷ ಆಹ್ವಾನಿತರು
ಶ್ರೀಮತಿ ವಂದನಾ ಹೆಚ್.ಎಂ. – ವಿಶೇಷ ಆಹ್ವಾನಿತರು
ದಯಾನಂದ ದೊಡ್ಡಮನಿ – ಕಾರ್ಯದರ್ಶಿ ಎಂ.ಎ.

### ಠೇವಣಿಗಳ ಮೇಲಿನ ಬಡ್ಡಿದರ

| | | | |
|---|---|---|---|
| 15 ದಿನದಿಂದ 45 ದಿನಗಳವರೆಗೆ | 5% | 1 ವರ್ಷದ ಮೇಲ್ಪಟ್ಟು 2 ವರ್ಷಗಳವರೆಗೆ | 8.5% |
| 46 ದಿನದಿಂದ 90 ದಿನಗಳವರೆಗೆ | 6% | 2 ವರ್ಷದ ಮೇಲ್ಪಟ್ಟು 3 ವರ್ಷಗಳವರೆಗೆ | 9.5% |
| 91 ದಿನದಿಂದ 180 ದಿನಗಳವರೆಗೆ | 6.5% | 3 ವರ್ಷದ ಮೇಲ್ಪಟ್ಟು | 10.5% |
| 181 ದಿನದಿಂದ 1 ವರ್ಷದವರೆಗೆ | 7.5% | | |

ಹಿರಿಯ ನಾಗರೀಕರಿಗೆ ಹೆಚ್ಚುವರಿಯಾಗಿ 0.5% ಬಡ್ಡಿ ನೀಡಲಾಗುವುದು


KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas